بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّیْ عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 40

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

06 ಅಕ್ಟೊಬರ್ 2022, 06 ಅಖಾ 1401 ಹಿಜರಿ ಶಮ್‌ಸಿ,
09 ರಬೀ ಉಲ ಅವ್ವಲ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَرَحْمَتِيْ وَسِعَتْ كُلَّ شَيْءٍ ۚ فَسَاَكْتُبُهَا لِلَّذِيْنَ يَتَّقُوْنَ وَيُؤْتُوْنَ الزَّكٰوةَ وَالَّذِيْنَ هُمْ بِاٰيٰتِنَا يُؤْمِنُوْنَ (اعراف:157)

**(ಅಲ್ ಅಅ್‌ರಾಫ್ : 157)**

**ಅಂದರೆ: ನನ್ನ ಕರುಣೆಯು ಸರ್ವವನ್ನೂ ಆವರಿಸಿಕೊಂಡಿದೆ. ಆದ್ದರಿಂದ ಭಯಭಕ್ತಿ ಹೊಂದಿದವರಿಗೂ ಝಕಾತ್ ನೀಡುವವರಿಗೂ ನಮ್ಮ ದೃಷ್ಟಾಂತಗಳಲ್ಲಿ ವಿಶ್ವಾಸವಿರಿಸುವವರಿಗೂ ಅದನ್ನು (ಕರುಣೆಯನ್ನು) ನಾನು ವಿಧಿಸಿದ್ದೇನೆ.'**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ನನ್ನ ಹೆಸರನ್ನು ಕರೆಯಿರಿ, ಆದರೆ ನನ್ನ ಉಪನಾಮವಲ್ಲ

(2120) ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ ಪೈಗಂಬರ್(ಸ) ಅವರು ಮಾರುಕಟ್ಟೆಯಲ್ಲಿದ್ದಾಗ ಒಬ್ಬ ವ್ಯಕ್ತಿಯು ಅವರನ್ನು ಹೀಗೆ ಕರೆದನು: ಓ ಅಬು ಅಲ್-ಖಾಸಿಮ್! ಅದಕ್ಕೆ ಪ್ರವಾದಿ(ಸ) ರವರು ಆ ವ್ಯಕ್ತಿಯ ಕಡೆ ತಿರುಗಿ ನೋಡಿದಾಗ ಆ ವ್ಯಕ್ತಿಯು ಹೇಳಿದನು: ನಾನು ಆ ಇನ್ನೊಬ್ಬ ವ್ಯಕ್ತಿಯನ್ನು ಕರೆದಿದ್ದೇನೆ. ಅದಕ್ಕೆ ಪ್ರವಾದಿ(ಸ) ನುಡಿದರು: ನನ್ನ ಹೆಸರನ್ನು ಹೆಸರಿಸಿ, ಆದರೆ ನನ್ನ ಉಪನಾಮವನ್ನು ಬಳಸಬೇಡಿ.

### ಓ ಅಲ್ಲಾ, ಹಸನ್‌ನನ್ನು ಪ್ರೀತಿಸುವ ವ್ಯಕ್ತಿಯನ್ನು ಪ್ರೀತಿಸು

(2122) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ ಪ್ರವಾದಿ(ಸ) ರವರು ದಿನದ (ಹಿಂದಿನ) ಪ್ರಹರದಲ್ಲಿ ಹೊರಗೆ ಹೋಗುತ್ತಿರುವಾಗ ಅವರು ನನ್ನೊಂದಿಗೆ ಮಾತನಾಡುತ್ತಿರಲಿಲ್ಲ, ಮತ್ತು ನಾನು ಅವರೊಂದಿಗೆ ಮಾತನಾಡುತ್ತಿರಲಿಲ್ಲ. ಬನೀ ಖೈನಾಕಾದ ಮಾರುಕಟ್ಟೆಗೆ ಬಂದು ಹಝ್ರತ್ ಫಾತಿಮಾ(ರ) ಅವರ ಮನೆಯ ಅಂಗಳದಲ್ಲಿ ಕುಳಿತು ಹೇಳಿದರು "ಮಗು ಇಲ್ಲಿದ್ದೀಯಾ? ಮಗು ಇಲ್ಲಿದ್ದೀಯ?" (ಅವರು ಹೀಗೆ ಹಝ್ರತ್ ಹಸನ್(ರ)ರವರನ್ನು ಕರೆಯುತ್ತಿದ್ದರು) ಹಝ್ರತ್ ಫಾತಿಮಾ(ರ)ರವರು ಅಲ್ಪ ಸಮಯ ಅವರನ್ನು ತಡೆದಿದ್ದರು. ಇದರಿಂದ ಅವರು ಹಾರ ಧರಿಸುತ್ತಿದ್ದಾರೆ ಅಥವಾ ಸ್ನಾನ ಮಾಡುತ್ತಿದ್ದಾರೆ ಎಂದು ನನಗೆ ಅರ್ಥವಾಯಿತು. ಅಷ್ಟರಲ್ಲಿ ಆ ಮಗು ಓಡೋಡಿ ಬಂತು. ಬಂದ ಕೂಡಲೇ ಅವರನ್ನು ಅಪ್ಪಿಕೊಂಡು ಮುತ್ತಿಟ್ಟು ಪ್ರವಾದಿ(ಸ) ನುಡಿದರು: ಓ ಸರ್ವಶಕ್ತನಾದ ಅಲ್ಲಾಹನೇ! ಇವನನ್ನು ನಿನ್ನ ಪ್ರೇಮಿಯನ್ನಾಗಿ ಮಾಡು ಮತ್ತು ಇವನನ್ನು ಪ್ರೀತಿಸುವ ವ್ಯಕ್ತಿಯನ್ನು ಸಹ ಪ್ರೀತಿಸು.

**(ಬುಖಾರಿ, ಸಂಪುಟ-4, ಕಿತಾಬ್ ಅಲ್-ಬಯು, 2008 ರಲ್ಲಿ ಪ್ರಕಟಿತ, ಖಾದಿಯಾನ್)**

**ಪ್ರವಾದಿ(ಸ) ಅವರು ತಮ್ಮ ಸಮುದಾಯದಲ್ಲಿ ಒಬ್ಬ ವ್ಯಕ್ತಿ ಅವತರಿಸುತ್ತಾನೆ ಎಂಬ ಶುಭ ವಾರ್ತೆಯನ್ನು ಪಡೆದಿದ್ದರು.**
**ಅವರು ಶಿಲುಬೆಯ ಧರ್ಮದ ಸತ್ಯವನ್ನು ಬಹಿರಂಗಪಡಿಸಲು ಶಿಲುಬೆಯನ್ನು ಮುರಿಯುವರು ಮತ್ತು ಈ ಅರ್ಥದಲ್ಲಿ ಅವರು ಮಸೀಹ್ ಇಬ್ನೆ ಮರಿಯಮ್ ಆಗಿರುವರು.**
**ಮತ್ತು ಅವರು ಆಂತರಿಕ ವಿಭಜನೆಗಳು ಮತ್ತು ಅವಿಧೇಯತೆಯನ್ನು ತೆಗೆದು ಹಾಕಿ, ಮಾರ್ಗದರ್ಶನದ ನಿಜವಾದ ಹಾದಿಯಲ್ಲಿ ಮುಸ್ಲಿಮರನ್ನು ನೆನಿಲ್ಲಿಸುತ್ತಾರೆ, ಆದ್ದರಿಂದ ಅವರನ್ನು ಮಹದಿ ಎಂದು ಕರೆಯಲಾಗುತ್ತದೆ.**

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಆ ಸಮಯದಲ್ಲಿ ಎರಡು ರೀತಿಯ ಪ್ರಲೋಭನೆಗಳು ಇರುತ್ತವೆ ಎಂದು ಪೈಗಂಬರ್(ಸ) ಅಂತ್ಯ ಕಾಲದ ಬಗ್ಗೆ ತಿಳಿಸಿದ್ದರು. ಒಂದು ಆಂತರಿಕ, ಇನ್ನೊಂದು ಬಾಹ್ಯ. ಆಂತರಿಕ ಪ್ರಲೋಭನೆಯು ಮುಸ್ಲಿಮರು ನಿಜವಾದ ಮಾರ್ಗದರ್ಶನವನ್ನು ಅನುಸರಿಸುವುದಿಲ್ಲ ಮತ್ತು ಕೆಟ್ಟ ಅಭ್ಯಾಸಗಳ ಪ್ರಭಾವಕ್ಕೆ ಒಳಗಾಗುತ್ತಾರೆ. ಜೂಜಾಟ, ವ್ಯಭಿಚಾರ, ಮದ್ಯಪಾನ ಮತ್ತು ಎಲ್ಲಾ ರೀತಿಯ ಕೆಟ್ಟ ಹಾದಿಗಳಲ್ಲಿ ತೊಡಗಿ ಅವರು ಅಲ್ಲಾಹನ ಮಿತಿಗಳನ್ನು ತೊರೆಯುತ್ತಾರೆ, ನಮಾಝ್ ಉಪವಾಸಗಳನ್ನು ತ್ಯಜಿಸುತ್ತಾರೆ ಅದೇ ರೀತಿ ಸರ್ವಶಕ್ತನಾದ ಅಲ್ಲಾಹನ ಆಜ್ಞೆಗಳನ್ನು ಲೆಕ್ಕಿಸುವುದಿಲ್ಲ ಮತ್ತು ಪವಿತ್ರ ಖುರ್‌ಆನ್‌ನ ಆದೇಶಗಳನ್ನು ಹಾಸ್ಯ ಮಾಡುತ್ತಾರೆ. ಬಾಹ್ಯ ಪ್ರಲೋಭನೆ ಅಂದರೆ ಪ್ರವಾದಿ ಮುಹಮ್ಮದ್(ಸ.ಅ) ಅವರನ್ನು ನಿಂದಿಸಲಾಗುತ್ತದೆ ಮತ್ತು ಇಸ್ಲಾಮ್ ಧರ್ಮವನ್ನು ಎಲ್ಲಾ ರೀತಿಯ ದಾಳಿಗಳಿಂದ ಅವಮಾನಿಸಲಾಗುತ್ತದೆ ಮತ್ತು ನಾಶಪಡಿಸಲಾಗುತ್ತದೆ. ಮಸೀಹ್(ಅ) ಅವರ ದೇವರು ಎಂದು ಮನವರಿಕೆ ಮಾಡಲು ಮತ್ತು ಅವನ ಶಿಲುಬೆಯ ಶಾಪವನ್ನು ನಂಬಲು ಎಲ್ಲಾ ರೀತಿಯ ತಂತ್ರಗಳು ಮತ್ತು ಕ್ರಮಗಳನ್ನು ಜಾರಿಗೆ ತರಲಾಗುತ್ತದೆ. ಈ ಎರಡು ಆಂತರಿಕ ಮತ್ತು ಬಾಹ್ಯ ಮಹಾ ಸಂಕಟಗಳ ಸೂಚನೆಯ ಸಮಯ, ಪವಿತ್ರ ಪ್ರವಾದಿ(ಸ) ಅವರು ಈ ಒಳ್ಳೆಯ ಸುದ್ದಿ ಪಡೆದರು ಅಂದರೆ ತಮ್ಮ ಉಮ್ಮಾತ್ತಿನಿಂದ ಒಬ್ಬ ವ್ಯಕ್ತಿಯನ್ನು ಕಳುಹಿಸಲಾಗುವುದು, ಅವರು ಬಾಹ್ಯ ಪ್ರಲೋಭನೆಯ ವಾಸ್ತವತೆಯನ್ನು ಬಹಿರಂಗಪಡಿಸುತ್ತಾರೆ, ಶಿಲುಬೆಯ ಧರ್ಮದ ಸತ್ಯಾಂಶವನ್ನು ಬಹಿರಂಗಪಡಿಸುವವರು ಮತ್ತು ಶಿಲುಬೆಯನ್ನು ಮುರಿಯುವವರಾಗಿರುತ್ತಾರೆ. ಈ ಅರ್ಥದಲ್ಲಿ ಅವರು ಮಸೀಹ್ ಇಬ್ನೆ ಮರಿಯಮ್ ಆಗಿರುತ್ತಾರೆ. ಮತ್ತು ಆಂತರಿಕ ವಿಭಜನೆಗಳು ಮತ್ತು ಅವಿಧೇಯತೆಯನ್ನು ತೆಗೆದುಹಾಕುತ್ತಾರೆ, ಅವರು ಮಾರ್ಗದರ್ಶನದ ನಿಜವಾದ ಮಾರ್ಗದಲ್ಲಿ ಸ್ಥಾಪಿಸಲ್ಪಡುತ್ತಾರೆ. ಅದಕ್ಕಾಗಿಯೇ ಅವರನ್ನು ಮಹದಿ ಎಂದು ಕರೆಯಲಾಗುವುದು. **ವಆಖರೀನ ಮಿನ್‌ಹುಮ್** ನಲ್ಲಿ ಈ ಶುಭವಾರ್ತೆಯನ್ನು ನೀಡಲಾಗಿದೆ. ಈ ಎರಡು ಪ್ರಲೋಬನೆಗಳು ಇರುತ್ತವೆ, ಈ ಪ್ರಲೋಭನೆಗಳ ಮೂಲವು ಎರಡು ಕೆಟ್ಟ ವಿಷಯಗಳ ಮೇಲೆ ಆಧಾರಿತವಾಗಿರುತ್ತವೆ. ಒಂದು ಅಲ್-ದಜ್ಜಾಲ್ ಮತ್ತು ಇನ್ನೊಂದು ಯಜೂಜ್ ಆಗಿರುವುದು.

**(ಮಲ್‌ಫೂಝಾತ್, ಸಂಪುಟ-1, ಪುಟ-401, ಮುದ್ರಿತ ಖಾದಿಯಾನ್ 2018)**

*** ರಾಷ್ಟ್ರೀಯ ಪ್ರಾಬಲ್ಯವು ನಿಜವಾಗಿಯೂ ಒಳ್ಳೆಯದು, ಆದರೆ ಅದನ್ನು ವಂಚನೆ ಮತ್ತು ಮೋಸದ ಮೂಲಕ ಸಾಧಿಸಲು ಅನುಮತಿಸಲಾಗುವುದಿಲ್ಲ**
*** ವಂಚನೆಯಿಂದ ಮತ್ತೊಂದು ಶಕ್ತಿಯನ್ನು ದುರ್ಬಲಗೊಳಿಸುವ ಉದ್ದೇಶದಿಂದ ಯಾವುದೇ ಒಪ್ಪಂದವನ್ನು ಮಾಡಬಾರದು**
*** ದುರ್ಬಲ ರಾಷ್ಟ್ರದೊಂದಿಗೆ ಆ ರಾಷ್ಟ್ರವನ್ನು ಒಪ್ಪಂದದ ಕಠಿಣತೆಗೆ ತರುವ ಮೂಲಕ ಅಧೀನಗೊಳಿಸಲು ಒಪ್ಪಂದವನ್ನು ಮಾಡಿಕೊಳ್ಳಬಾರದು.**
*** ಇನ್ನೊಂದು ಶಕ್ತಿಯ ಅಭಿವೃದ್ಧಿಯನ್ನು ತಡೆಯುವ ಉದ್ದೇಶದಿಂದ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳಬಾರದು**

ಸಯ್ಯಿದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ನಹಲ್ ಆಯತ್ 93 **ವಲಾತಕೂನೂ ಕಲ್ಲತೀ ನಖಝತ್ ಗಝ್‌ಲಹಾ ಮಿಮ್ ಬಅ್‌ದಿ ಖುವ್ವತಿನ್ ಅನ್ಕಾಸ; ತತ್ತಖಿಝೂನ ಈಮಾನುಕುಮ್ ದಖಲಮ್ ಬೈನಕುಮ್ ಅನ್**

*(ಪುಟ ಸಂಖ್ಯೆ-10 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ❁ شَرُّ السُّمُوْمِ عَدَاوَةُ الصُّلَحَاءِ

**ಒಂದು ಸಾವಿರ ರೂಪಾಯಿಯ ಗೌರವಾನ್ವಿತ ಬಹುಮಾನದ ಸವಾಲು**

**ಯಾರಾದರೂ ಆರ್ಯ ಪವಿತ್ರ ಖುರ್ಆನ್‌ನಿಂದ ಆಕಾಶ ಒಂದು ಜಡ ವಸ್ತುವಾಗಿದೆ ಮತ್ತು ಸೃಷ್ಟಿಸಲ್ಪಟ್ಟ ವಸ್ತುವಾಗಿದೆ ಎಂದು ತೋರಿಸಿ ಕೊಟ್ಟರೆ, ಅವರು  ಪವಿತ್ರ ಖುರಆನ್‌ನಿಂದ ಆ ವಚನಗಳನ್ನು ತೋರಿಸುತ್ತಲೇ ಒಂದು ಸಾವಿರ ರೂಪಾಯಿ ಒಪ್ಪಿಸುವೆನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಗೌರಾವಾನ್ವಿತ ಬಹುಮಾನದ ಪಂಥ್ವಾಹಾನ ನಾವು ಅವರ ಗ್ರಂಥ "ನಸೀಮ್ ದಾವತ್" ರೂಹಾನಿ ಖಝಾಯಿನ್ ಸಂಪುಟ 10 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಹಿಂದಿನ ಸಂಚಿಕೆಯಲ್ಲಿ ನಾವು ಖಾದಿಯಾನಿನ ಕೆಲ ನವಅಹ್ಮದಿ ಆರ್ಯರು ಅತ್ಯಂತ ಅನುಕಂಪ ಮತ್ತು ನಿಷ್ಠೆಯಿಂದ 1903 ರಲ್ಲಿ ಒಂದು ಜಾಹೀರಾತು ಹೊರಡಿಸಿದ್ದನ್ನು ವಿವರಿಸಿದ್ದೆವು. ಅದರಲ್ಲಿ ಅವರು ಅತ್ಯಂತ ವಿನಯದಿಂದ ಹಾಗೂ ನಮ್ರತೆಯಿಂದ ಖಾದಿಯಾನಿನ ಆರ್ಯರೊಡನೆ ಯಾವುದಾದರು ಒಂದು ಸಮ್ಮೇಳನ, ಪ್ರಾರ್ಥನೆ ಅಥವಾ ಮುಬಾಹಲ ಮೂಲಕ ಯಾರು ಸತ್ಯದ ಮೇಲಿದ್ದಾರೆ ಎಂಬುದನ್ನು ಕಂಡುಕೊಳ್ಳಲು, ಇಸ್ಲಾಮ್ ಧರ್ಮ ಸತ್ಯವೇ ಅಥವಾ ಆರ್ಯ ಧರ್ಮ ಸತ್ಯವೇ ನಿರ್ಣಯಿಸಲಿ. ಅಷ್ಟಕ್ಕೆ ಖಾದಿಯಾನಿನ ಆರ್ಯರು ಕೋಪಗೊಂಡರು ಮತ್ತು ಅವರು ಅದರ ಉತ್ತರವಾಗಿ ಒಂದು ಪತ್ರಿಕೆ ಹೊರಡಿಸಿದರು. ಅದರಲ್ಲಿ ಬೈಗಳಗಳನ್ನು ಬಳಸಲಾಯಿತು. ಆ ಬೈಗಳಗಳು ಅವರು ನವಮುಸ್ಲಿಮ್ ಆರ್ಯರಿಗೆ ಅಷ್ಟೇ ಬಳಸಲಿಲ್ಲ. ಅದರ ಜೊತೆಗೆ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ನಮ್ಮ ಪ್ರೀತಿಯ ನೇತಾರರಾದ ಸಯ್ಯದ್‌ನಾ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರನ್ನು ಸಹ ಬೈದರು. ಅವರು ಈ ಪತ್ರಿಕೆಯಲ್ಲಿ ಅಪಾದನೆ ಮಾಡಿದರು. ಅಹ್ಮದಿಯರಾದ ಆರ್ಯರು ಮೊದಲು ನಾಲ್ಕು ವೇದಗಳನ್ನು ಓದಿ ಇಸ್ಲಾಮಿ ಶಿಕ್ಷಣದಿಂದ ತುಲನೆ ಮಾಡಿ ಮತ್ತೆ ಮುಸಲ್ಮಾನನಾಗಬಹುದಿತ್ತು. ಅದರ ಉತ್ತರ ನಾವು ಹಿಂದಿನ ಸಂಚಿಕೆಯಲ್ಲಿಯೇ ಕೊಟ್ಟಿದ್ದೆವು. ಮತ್ತೆ ಅವರು ಫೆಬ್ರವರಿ 1903 ರಂದು ಖಾದಿಯಾನಿನಲ್ಲಿ ಒಂದು ಸಮ್ಮೇಳನ ನಡೆಸಿದರು. ಅದರಲ್ಲಿಯೂ ಸಹ ಅವರು ಇಸ್ಲಾಮಿನ ಮೇಲೆ ಅಪಾದನೆಗಳನ್ನು ಹೊರಿಸಿದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಆ ಎಲ್ಲ ಅಪಾದನೆಗಳ ಉತ್ತರ "ನಸೀಮ ದಾವತ್'ನಲ್ಲಿ ಕೊಟ್ಟಿದ್ದಾರೆ. ಒಂದು ಅಪಾದನೆ ಅವರದು. ಆಕಾಶಕ್ಕೆ ಸಂಬಂಧಿಸಿದ್ದಾಗಿತ್ತು. ಈ ಸಂಚಿಕೆಯಲ್ಲಿ ನಾನು ಆಕಾಶ ಕುರಿತು ಮಾಡಲಾದ ಆಕ್ಷೇಪಕ್ಕೆ ಉತ್ತರ ಮತ್ತು ಆ ಕುರಿತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಬಹುಮಾನದ ಸವಾಲು ಅವರದ್ದೇ ಪದಗಳಲ್ಲಿ ಪ್ರಸ್ತುತಪಡಿಸಿವೆವು.

**ಅವರು ಅಪಾದನೆ ಮಾಡಿದರು :::** ಮುಸ್ಲಿಮರು ಅಲ್ಲಾಹನ ನಿಂದನೆಯನ್ನು ಮಾಡುತ್ತಿದ್ದಾರೆ. ಏಕೆಂದರೆ ಅಲ್ಲಾಹನು ಆಕಾಶದ ಮೇಲೆ ಕುಳಿತುಕೊಂಡಿದ್ದಾನೆ ಎಂಬುದು ಅವರ ವಿಶ್ವಾಸವಾಗಿದೆ. ನಾಲ್ಕು ದೇವದೂತರು ಆ ಸಿಂಹಾಸನವನ್ನು ಎತ್ತಿಹಿಡಿದಿದ್ದಾರೆ. ಅದರಿಂದ ಸಾಬೀತಾಗುತ್ತದೆ. ಅಲ್ಲಾಹನು ಸೀಮಿತನಾಗಿದ್ದಾನೆ ಮತ್ತು ಸ್ವಯಂ ನೆಲೆ ನಿಲ್ಲುವವನಾಗಿಲ್ಲ. ಸೀಮಿತವಾದ ಮೇಲೆ ಅವನ ಜ್ಞಾನ ಸಹ ಸೀಮಿತವಾಗುವುದು ಮತ್ತು ಪ್ರತ್ಯಕ್ಷವಾಗಿರಲು ಸಾಧ್ಯವಿಲ್ಲ.

ಈ ಅಪಾದನೆಯ ಉತ್ತರವಾಗಿ ಸಯ್ಯದ್‌ನಾ ಹಝ್ರತ್ ಮಸಿಹೇಮೌದ್(ಅ) ಹೇಳಿದರು.

ಓ ಮಹನಿಯರೇ! ಆಕಾಶವು ಅಂದು ದೈಹಿಕ ವಸ್ತು ಅಥವಾ ಸೃಷ್ಟಿಸಲ್ಪಟ್ಟ ವಸ್ತು ಮುಸ್ಲಿಮರ ವಿಶ್ವಾಸವಲ್ಲ. ಅದರ ಮೇಲೆ ಅಲ್ಲಾಹನು ಕುಳಿತುಕೊಂಡಿದ್ದಾನೆ ಎಂಬುವುದು ಮುಸ್ಲಿಮರ ವಿಶ್ವಾಸವಲ್ಲ. ಪವಿತ್ರ ಖುರ್ಆನ್‌ನ್ನು ಪ್ರಾರಂಭದಿಂದ ಕೊನೆಯವರೆಗೆ ಓದಿ ಅದರಲ್ಲಿ ಅಗೌರವವು ಕೂಡ ಅಂದು ವಸ್ತು, ಸೀಮಿತ ಮತ್ತು ಸೃಷ್ಟಿಸಲ್ಪಟ್ಟ ವಸ್ತುವಾಗಿದೆ ಎಂದು ಎಲ್ಲೂ ಸಹ ಕಾಣಲಾರಿ. ಅಲ್ಲಾಹನು ಪವಿತ್ರ ಖುರ್ಆನ್‌ಲ್ಲಿ ಹಲವು ಸಲ ಹೇಳಿದನು. ಸೃಷ್ಟಿಸಲ್ಪಟ್ಟ ಎಲ್ಲಾ ವಸ್ತುಗಳನ್ನು ನಾನೇ ಸೃಷ್ಟಿಸಿರುತ್ತೇನೆ. ಭೂಮಿ, ಆಕಾಶ, ಆತ್ಮ ಮತ್ತು ಅದರ ಎಲ್ಲ ಗುಣಗಳ ಸೃಷ್ಟಿಕರ್ತ ನಾನೇ ಆಗಿರುತ್ತೇನೆ. ನಾನು ನನ್ನ ಅಸ್ತಿತ್ವದಲ್ಲಿ ಸ್ವಯಂ ನೆಲೆ ನಿಲ್ಲುವವನಾಗಿದ್ದೇನೆ. ಮತ್ತು ಎಲ್ಲ ವಸ್ತುಗಳು ನನ್ನಿಂದಾಗಿ ನೆಲೆನಿಂತಿವೆ. ಏನೆಲ್ಲ ವಸ್ತುಗಳು ನಮಗೆ ಕಾಣುತ್ತಿರುವುದೋ, ಆ ಅಣು ಅಣುವೂ ಸಹ ನನ್ನ ಸೃಷ್ಟಿಯಾಗಿದೆ. ಆದರೆ ಎಲ್ಲೂ ಸಹ ಆಕಾಶ ಒಂದು ಜಡವಸ್ತು ಆಗಿದೆ. ನಾನು ಅದನ್ನು ಸೃಷ್ಟಿಸಿರುತ್ತೇನೆ ಎಂದು ಹೇಳಿಲ್ಲ. **ಯಾರಾದರೂ ಆರ್ಯ ಪವಿತ್ರ ಖುರ್ಆನ್‌ನಿಂದ ಆಕಾಶ ಎಂಬುದು ಒಂದು ಜಡವಸ್ತುವಾಗಿದೆ. ಅದು ನನ್ನ ಸೃಷ್ಟಿ ಆಗಿದೆ ಎಂದು ಎತ್ತಿ ತೋರಿಸಿದರೆ ಅವನು ಖಾದಿಯಾನಿನಿಂದ ಹೊರಗೆ ಹೋಗುವ ಮೊದಲು ಒಂದು ಸಾವಿರ ರೂಪಾಯಿ ಬಹುಮಾನ ನೀಡುವೆನು. ನಾನು ಆ ದೇವನ ಮೇಲೆ ಆಣೆ ಮಾಡಿ ಹೇಳುತ್ತೇನೆ. ಅವನ ಕುರಿತು ಸುಳ್ಳು ಆಣೆ ಮಾಡುವುದು ಶಾಪಸ್ತರ ಕೆಲಸವಾಗಿದೆ, ನಾನು ಪವಿತ್ರ ಖುರ್ಆನ್‌ನಿಂದ ಆ ವಚನಗಳನ್ನು ತೋರಿಸುತ್ತಲೇ ಸಾವಿರ ರೂಪಾಯಿ ಅವನಿಗೆ ಒಪ್ಪಿಸುವೆನು.** ಇಲ್ಲದಿದ್ದರೆ ಗೌರವಪೂರ್ವಕವಾಗಿ ಹೇಳುತ್ತೇನೆ. ಅಂತಹ ವ್ಯಕ್ತಿ ಶಾಪಕ್ಕೆ ಗುರಿಯಾಗುವನು, ಅವನು ಅಲ್ಲಾಹನ ಮೇಲೆ ಸುಳ್ಳು ಹೇಳುವವನಾದರೆ.

ಇನ್ನೊಂದು ಆಕ್ಷೇಪದ ವಿಷಯ ಆಕಾಶವು ಒಂದು ಪ್ರತ್ಯೇಕ ವಸ್ತು ಆಗಿದೆ. ಅದರ ಮೇಲೆ ಅಲ್ಲಾಹನು ಕುಳಿತುಕೊಂಡಿದ್ದಾನೆ ಎಂದಾಗಿದೆ. ಅದು ಸಾಬೀತುಗೊಂಡಿಲ್ಲ ಎಂದಾದರೆ, ಆಕ್ಷೇಪ ಆಕ್ಷೇಪವಾಗಿ ಉಳಿಯಲಾರದು ಅಲ್ಲಾಹನು ಸ್ಪಷ್ಟವಾಗಿ ಹೇಳಿರುವನು. ಅವನು ಭೂಮಿಯಲ್ಲಾಗಲಿ, ಆಕಾಶದಲ್ಲಾಗಲೀ ಅಥವಾ ಯಾವುದೇ ವಸ್ತುವಿನ ಮೇಲಿಲ್ಲ. ಆದರೆ ಅವನು ತನ್ನ ಅಸ್ತಿತ್ವ ಸ್ವಯಂ ಹೊಂದಿದವನಾಗಿದ್ದಾನೆ ಮತ್ತು ಸ್ವಯಂ ನೆಲೆನಿಲ್ಲುವವನಾಗಿದ್ದಾನೆ. ಎಲ್ಲ ವಸ್ತುಗಳನ್ನು ಎತ್ತಿಹಿಡಿದವನಾಗಿದ್ದಾನೆ ಮತ್ತು ಎಲ್ಲ ವಸ್ತುಗಳ ಮೇಲೆ ಪ್ರಭುತ್ವ ಹೊಂದಿರುವನು. ಮೂವರು ಇದ್ದಲ್ಲಿ ನಾಲ್ಕನೆಯವನಾಗಿ ಅವರೊಂದಿಗೆ ಅಲ್ಲಾಹನಿದ್ದಾನೆ. ಎಲ್ಲಿ ಐವರಿರುವರೋ ಆರನೆಯವನಾಗಿ ಅವರ ಜೊತೆಗೆ ನಾನಿದ್ದೇನೆ, ನಾನು ಇಲ್ಲದ ಯಾವ ಸ್ಥಳವು ಇಲ್ಲ. **"ಅಯ್‌ನಮ ತುವಲ್ಲೌ ಫಸಮ್ಮ ವಜ್‌ಹುಲ್ಲಾಹಿ"** ಎಲ್ಲಿ ಮುಖ ತಿರುಗಿಸುವಿರೊ ಅಲ್ಲಿ ಅಲ್ಲಾಹನನ್ನು ನೀವು ಪಡೆಯುವಿರಿ. ಅವನು ನಮ್ಮ ರಕ್ತನಾಳಗಿಂತಲೂ ಸಮೀಪವಾಗಿದ್ದಾನೆ. ಅವನೇ ಆದಿ. ಅವನೇ ಅಂತ್ಯ. ಅವನು ಎಲ್ಲ ವಸ್ತುಗಳಿಗಿಂತಲೂ ಹೆಚ್ಚು ಗೋಚರವಾಗಿದ್ದಾನೆ. ಮತ್ತು ಅವನು ಗೌಪ್ಯಾನು ಗೌಪ್ಯನಾಗಿದ್ದಾನೆ. ಮತ್ತೆ ಹೇಳಿದನು **"ವ ಇಝು ಸಅಲಕ ಇಬಾದಿ ಅನ್ನೀ ಫಇನ್ನೀ ಖರೀಬುನ್; ಉಜೀಬು ದಅ್‌ವತದ್ದಾಯಿ ಇಝಾ ದಆನ್"**

ಅಂದರೆ (ಓ ಪ್ರವಾದಿ) ನನ್ನ ಬಗ್ಗೆ ದಾಸರು ನಿನ್ನೊಡನೆ ಕೇಳಿದರೆ (ಹೇಳು) ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಪ್ರತಿಯೊಂದು ವಸ್ತುವಿನ ಕೀಲಿಗೈ, ನನ್ನ ಕೈಯಲ್ಲಿದೆ. ನನ್ನ ಜ್ಞಾನವು ಎಲ್ಲವನ್ನು ಆವರಿಸಿಕೊಂಡಿದೆ. ಭೂಮ್ಯಾಕಾಶವನ್ನು ಎತ್ತಿಹಿಡಿದವನು ನಾನೇ ಆಗಿದ್ದೆನೆ. ನಿಮ್ಮನ್ನು ಜಲ ನೆಲದಲ್ಲಿ ರಕ್ಷಿಸುವವನು ನಾನೇ ಆಗಿದ್ದೇನೆ.

**ಪವಿತ್ರ ಖುರ್ಆನ್‌ನಲ್ಲಿ ಆಕಾಶದ ಅರ್ಥ, ಎಲ್ಲೆಡೆ ದೇವರ ಘನತೆ, ಶಕ್ತಿ ಮತ್ತು ಉತ್ತರ ಸೂಚಿಸುವಿಕೆಯಾಗಿದೆ.**

ಈ ಎಲ್ಲ ವಚನಗಳು ಪವಿತ್ರ ಖುರ್ಆನ್‌ನಲ್ಲಿವೆ. ಮುಸಲ್ಮಾನರ ಒಂದೊಂದು ಮಗು ಸಹ ಅದನ್ನು ತಿಳಿದವನಾಗಿದ್ದಾನೆ. ಮತ್ತು ಓದಿರುತ್ತಾನೆ ಯಾರು ಬಯಸಿದರೂ ನಮ್ಮನ್ನು ಕೇಳಬಹುದು. ಆದರೂ ಈ ವಚನವನ್ನು ಜಾಹೀರುಪಡಿಸುವ ಬದಲು ಒಂದು ಮಾರ್ಮಿಕ ವಿಷಯವನ್ನು ಹಿಡಿದು ಅದರ ಮೇಲೆ ಆಕ್ಷೇಪ ಮಾಡುವುದು ಅದೇ ಆರ್ಯ ಸಮಾಜದವರ ಪ್ರಮಾಣಿಕತೆಯೇ? ಅಲ್ಲಾಹನನ್ನು ಸೀಮಿತ ಎನ್ನುವ ಮುಸಲ್ಮಾನ ಯಾರಿದ್ದಾರೆ ಅಥವಾ ಅವನ ವಿಶಾಲ ಹಾಗೂ ಪರಿಮಿತ ಹಾಗೂ ಅಪರಿಮಿತ ಜ್ಞಾನವನ್ನು ನಿರಾಕರಿಸುವವನು ಯಾರಾಗಿದ್ದಾರೆ. ಈಗ ಸರಿಯಾಗಿ ನೆನಪಿಟ್ಟುಕೊಳ್ಳಿ. ಪವಿತ್ರ ಖುರ್ಆನ್‌ನಲ್ಲಿ ಅಲ್ಲಾಹನನ್ನು ದೇವದೂತರು ಎತ್ತಿ ಹಿಡಿದಿದ್ದಾರೆ ಎಂದು ಎಲ್ಲೂ ಕೂಡ ಬರೆದಿಲ್ಲ. ಅಲ್ಲಾಹನು ಪ್ರತಿಯೊಂದು ವಸ್ತುವನ್ನು ಎತ್ತಿಹಿಡಿಯುವವನಾಗಿದ್ದಾನೆ. ಹೌದು ಕೆಲ ಸ್ಥಳಗಳಲ್ಲಿ ಆಧ್ಯಾತ್ಮಿಕ ಅರ್ಥದಲ್ಲಿ ಅಲ್ಲಾಹನ ಸಿಂಹಾಸನವನ್ನು ದೇವದೂತರು ಎತ್ತಿ ಹಿಡಿಯುತ್ತಿದ್ದಾರೆ. ಆದರೆ ಬುದ್ಧಿವಂತರು ಇಲ್ಲಿ ತಿಳಿಯಬಹುದು, ಆಕಾಶವು ಜಡವಸ್ತುವೇ ಅಲ್ಲ ಎನ್ನುವಾಗ ದೇವದೂತರು ಆ ವಸ್ತುವನ್ನು ಹೇಗೆ ಎತ್ತಿಹಿಡಿಯುತ್ತಿದ್ದಾರೆ? ಅವಶ್ಯವಾಗಿ ಅದು ಆಧ್ಯಾತ್ಮಿಕ ಅರ್ಥ ಒಳಗೊಂಡಿದೆ. ಆದರೆ ಆರ್ಯ ಸಾಹೇಬರುಗಳು ಅದನ್ನು ಅರ್ಥ ಮಾಡಿಕೊಳ್ಳಲಿಲ್ಲ. ಏಕೆಂದರೆ ಮನುಷ್ಯ ಸ್ವಾರ್ಥ ಹಾಗೂ ದ್ವೇಷದ ಸಮಯ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್ಬ ಜುಮುಅ

**ಕೆಲವು ಇತಿಹಾಸಕಾರರು ಹಝ್ರತ್ ಉಮರ್(ರ) ಅವರ ಆಳ್ವಿಕೆಯಲ್ಲಿ ಡಮಾಸ್ಕಸ್ನ ವಿಜಯವನ್ನು ವಿವರಿಸುತ್ತಾರೆ ಎಂಬುದು ಇಲ್ಲಿ ಸ್ಪಷ್ಟವಾಗಿರಬೇಕು, ಆದರೆ ಡಮಾಸ್ಕಸ್ನ ಈ ಯುದ್ಧವು ಹಝ್ರತ್ ಅಬುಬಕರ್ ಸಿದ್ದಿಕ್(ರ) ರವರ ಆಳ್ವಿಕೆಯಲ್ಲಿ ಪ್ರಾರಂಭವಾಯಿತು. ಆದಾಗ್ಯೂ, ಅವರ ವಿಜಯದ ಸುದ್ದಿಯನ್ನು ಮದೀನಾಕ್ಕೆ ಕಳುಹಿಸಿದಾಗ, ಆ ಸಮಯದಲ್ಲಿ ಹಝ್ರತ್ ಅಬುಬಕರ್(ರ) ಅವರು ಈಗಾಗಲೇ ನಿಧನ ಹೊಂದಿದ್ದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02-09-2022** ರಂದು ನೀಡಿದ **ಖುತ್ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَ اِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಅಬೂಬಕರ್(ರ)ರ ಕಾಲದ ಯುದ್ಧಗಳ ಪ್ರಸ್ತಾಪ ನಡೆಯುತ್ತಿತ್ತು. ಈ ಸಂಬಂಧವಾಗಿ ಹಿಜರೀ 13ರ ಡಮಸ್ಕಸ್ ವಿಜಯದ ಬಗ್ಗೆ ಸ್ವಲ್ಪ ವಿವರವಾಗಿ ಹೇಳುವೆನು. ಇದು ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ನಡೆದ ಕೊನೆಯ ಯುದ್ಧವಾಗಿತ್ತು. ಡಮಸ್ಕಸಿನ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ. ಇದು ಪುರಾತನ ಸಿರಿಯದ ರಾಜಧಾನಿಯಾಗಿತ್ತು. ಡಮಸ್ಕಸ್ ಚಾರಿತ್ರಿಕ ಪ್ರಾಮುಖ್ಯತೆಯನ್ನು ಹೊಂದಿರುವ ಒಂದು ಪಟ್ಟಣವಾಗಿದೆ. ಆರಂಭದಲ್ಲಿ ಇದು ವಿಗ್ರಹ ಆರಾಧನೆಯ ದೊಡ್ಡದಾದೊಂದು ಕೇಂದ್ರವಾಗಿತ್ತು. ಆದರೆ ಕ್ರೈಸ್ತ ಧರ್ಮ ಬಂದಾಗ ಅದರ ದೇವಾಲಯಗಳನ್ನು ಚರ್ಚ್‌ಗಳಾಗಿ ಮಾರ್ಪಾಡು ಮಾಡಲಾಯಿತು. ಇದೊಂದು ಪ್ರಧಾನ ವ್ಯಾಪಾರ ಕೇಂದ್ರವಾಗಿತ್ತು. ಅಲ್ಲಿ ಅರೇಬಿಯರು ನೆಲೆಸಿದ್ದರು. ಮುಸ್ಲಿಮರ ವ್ಯಾಪಾರ ತಂಡ ಅಲ್ಲಿ ಬರುತ್ತಿದ್ದರು. ಅದೇ ಕಾರಣದಿಂದ ಅವರಿಗೆ ಅಲ್ಲಿಯ ವಿವರಗಳು ಗೊತ್ತಿದ್ದುವು. ಡಮಸ್ಕಸ್ ಎಂಬುದು ಒಂದು ಕೋಟೆ ರೂಪದ ಗೋಡೆಗಳಿಂದ ಮುಚ್ಚಲ್ಪಟ್ಟ ಪಟ್ಟಣವಾಗಿತ್ತು. ಸುರಕ್ಷೆ ಮತ್ತು ಭದ್ರತೆಯ ಕಾರಣದಿಂದ ಅದಕ್ಕೆ ವಿಶಿಷ್ಟವಾದ ಸ್ಥಾನವಿತ್ತು. ಅದರ ಗೋಡೆಗಳನ್ನು ದೊಡ್ಡ ದೊಡ್ಡ ಬಂಡೆಕಲ್ಲುಗಳಿಂದ ನಿರ್ಮಿಸಲಾಗಿದ್ದುವು. ಗೋಡೆಯ ಎತ್ತರ 6 ಮೀಟರ್‌ಗಳು ಆಗಿದ್ದುವು. ಅದಕ್ಕೆ ಅತ್ಯಂತ ದೃಢವಾದ ಬಾಗಿಲುಗಳನ್ನು ಅಳವಡಿಸಲಾಗಿದ್ದುವು. ಗೋಡೆಯ ದಪ್ಪ ಮೂರು ಮೀಟರ್‌ಗಳು ಆಗಿದ್ದುವು. ಬಾಗಿಲುಗಳನ್ನು ಬಲವಾಗಿ ಮುಚ್ಚಲಾಗುತ್ತಿದ್ದುವು. ಗೋಡೆಯ ನಾಲ್ಕೂ ಕಡೆಗಳಲ್ಲಿ ಆಳವಾದ ಹೊಂಡಗಳಿದ್ದುವು. ಅದರ ಅಗಲ ಮೂರು ಮೀಟರ್ ಆಗಿತ್ತು. ಆ ಹೊಂಡಗಳನ್ನು ನದಿ ನೀರಿನಿಂದ ಯಾವಾಗಲೂ ತುಂಬಿಸಿ ಇಡಲಾಗುತ್ತಿತ್ತು. ಈ ರೀತಿಯಾಗಿ ಡಮಸ್ಕಸ್ ಸಾಕಷ್ಟು ಸುದೃಢ ಮತ್ತು ಸುರಕ್ಷಿತವಾಗಿತ್ತು. ಅದರೊಳಗೆ ಪ್ರವೇಶಿಸುವುದು ಸುಲಭವಾಗಿರಲಿಲ್ಲ. (ಸಯ್ಯಿದುನಾ ಉಮರ್ ಬಿನ್ ಖತ್ತಾಬ್(ರ), ಅಲೀ ಮುಹಮ್ಮದ್ ಅಸ್ಸಲಾಬಿ, ಪುಟ-725, ಅಲ್‌ಫುರ್ಖಾನ್ ಮುಝಫ್ಫರ್‌ಗಡ್)

ಹಝ್ರತ್ ಅಬೂಬಕರ್(ರ) ಸಿರಿಯದ ಕಡೆಗೆ ಅನೇಕ ಸೈನ್ಯಗಳನ್ನು ಕಳುಹಿಸಿದಾಗ, ಹಝ್ರತ್ ಅಬೂ ಉಬೈದ(ರ)ರನ್ನು ಒಂದು ಸೇನೆಯ ಅಮೀರ್‌ರನ್ನಾಗಿ ಮಾಡಿಕೊಂಡು ಹಿಮಸಿಗೆ ತಲುಪಲು ಆದೇಶಿಸಿದರು. ಹಿಮಸ್ ಎಂಬುದು ಸಿರಿಯದಲ್ಲಿ ಡಮಸ್ಕಸಿನ ಸಮೀಪವಿರುವ ದೊಡ್ಡ ಪಟ್ಟಣವಾಗಿತ್ತು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-333, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಫರ್ಹಂಗ್ ಸೀರತ್, ಪುಟ-106, ಝುವಾರ ಅಕಾಡಮಿ ಕರಾಚಿ)

ಹಝ್ರತ್ ಅಬೂಬಕರ್(ರ)ರ ನಿರ್ದೇಶನ ಪ್ರಕಾರ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಡಮಸ್ಕಸಿಗೆ ತಲುಪಿ ಇಸ್ಲಾಮಿನ ಇತರ ಸೇನೆಗಳೊಂದಿಗೆ ಅದಕ್ಕೆ ಮುತ್ತಿಗೆ ಹಾಕಿದರು.

ಡಮಸ್ಕಸ್ ನವಾಸಿಗಳು ಕೋಟೆಯ ಗೋಡೆಯನ್ನೇರಿ ಮುಸ್ಲಿಮರ ಮೇಲೆ ಕಲ್ಲುಗಳನ್ನು ಎಸೆಯುತ್ತಿದ್ದರು. ಮುಸ್ಲಿಮರು ಚರ್ಮದ ಗುರಾಣಿಗಳಿಂದ ತಮ್ಮ ಬಚಾವು ಮಾಡುತ್ತಿದ್ದರು. ಅವಕಾಶ ಸಿಗುವಾಗಲೆಲ್ಲ ಮುಸ್ಲಿಮರು ಕೂಡ ಅವರಿಗೆ ಬಾಣಗಳನ್ನು ಹಾರಿಸುತ್ತಿದ್ದರು. ಹೀಗೆ 20 ದಿನಗಳು ಕಳೆದುವು. ಆದರೆ ಯಾವುದೇ ಫಲಿತಾಂಶ ಮುಂದೆ ಬರಲಿಲ್ಲ. ಡಮಸ್ಕಸ್ ನಿವಾಸಿಗಳು ಕೋಟೆಯೊಳಗೆ ಸುತ್ತವರೆಯಲ್ಪಟ್ಟ ಕಾರಣದಿಂದ ಕಠಿಣ ಸಂಕಷ್ಟದಲ್ಲಿದ್ದರು. ಕೋಟೆಯಲ್ಲಿ ದಿನಸಿ ದಾಸ್ತಾನು ಎಂದರೆ, ಸಂಗ್ರಹಿಸಲಾದ ಆಹಾರ ಸಾಮಗ್ರಿಗಳು ಮುಗಿಯುತ್ತಿದ್ದುವು. ಅದಲ್ಲದೇ ಡಮಸ್ಕಸ್ ನಿವಾಸಿಗಳ ಕೃಷಿಭೂಮಿಗಳು ಕೋಟೆಯ ಹೊರಗೆ ಆಗಿದ್ದುವು. ಆದ್ದರಿಂದ ಅವರ ಕೃಷಿ ಕೆಲಸಗಳು ಹಾಳಾಗುತ್ತಿದ್ದುವು. ಕೋಟೆಯಲ್ಲಿ ದವಸಧಾನ್ಯಗಳು ಬರಲು ಸಾಧ್ಯವಿರಲಿಲ್ಲ. ಇತರ ವ್ಯಾಪಾರ ಸಾಮಗ್ರಿಗಳ ಕೊರತೆಯೂ ಇತ್ತು. ಮುತ್ತಿಗೆಯ ಸಮಯ ದೀರ್ಘಕಾಲದ ವರೆಗೆ ಇದ್ದ ಕಾರಣದಿಂದ ಅವರು ಕಠಿಣವಾದ ಸಂಕಷ್ಟ ಮತ್ತು ವಿಪತ್ತಿನಲ್ಲಿ ಸಿಲುಕಿದ್ದರು. ಮುತ್ತಿಗೆಯು 20 ದಿನಗಳನ್ನು ದಾಟಿದಾಗ, ಹಿರ್ಕಲ್ ಅರಸನು ಅಜ್ನಾದೈನ್ ಪ್ರದೇಶದಲ್ಲಿ ರೋಮನರ ದೊಡ್ಡದಾದ ಸೈನ್ಯವೊಂದನ್ನು ಒಟ್ಟುಗೂಡಿಸಿರುವನು ಎಂಬ ಸುದ್ದಿ ಮುಸ್ಲಿಮರಿಗೆ ಲಭಿಸಿತ್ತು. ಈ ವಾರ್ತೆ ಕೇಳಿದ ಕೂಡಲೇ ಹಝ್ರತ್ ಖಾಲಿದ್(ರ) ಕೋಟೆಯ ಪೂರ್ವ ದಿಕ್ಕಿನ ಹೆಬ್ಬಾಗಿಲ ಬಳಿಯಿಂದ ಹೊರಟು ಜಾಬಿಯ ಪಟ್ಟಣದ ದಿಕ್ಕಿನ ಕಡೆಯಿರುವ ಹೆಬ್ಬಾಗಿಲಿನ ಸಮೀಪ ನಿಂತಿದ್ದ ಹಝ್ರತ್ ಅಬೂಉಬೈದ(ರ)ರ ಬಳಿಗೆ ಬಂದರು ಮತ್ತು ಅವರಿಗೆ ಸ್ಥಿತಿಗತಿಗಳನ್ನು ತಿಳಿಸುತ್ತಾ, ನಾವು ಡಮಸ್ಕಸಿನ ಮುತ್ತಿಗೆಯನ್ನು ಬಿಟ್ಟುಕೊಂಡು ಅಜ್ನಾದೈನಿನಲ್ಲಿರುವ ರೋಮಿನ ಸೈನ್ಯವನ್ನು ಎದುರಿಸಲು ಹೋಗೋಣವೆಂಬ ತನ್ನ ಸಲಹೆಯನ್ನು ನೀಡಿದರು. ಅಲ್ಲಾಹನು ನಮಗೆ ವಿಜಯ ದಯಪಾಲಿಸಿದರೆ ನಾವು ಇಲ್ಲಿಗೆ ಬಂದು ಡಮಸ್ಕಸಿನ ಸಮಸ್ಯೆಯನ್ನು ಪರಿಹರಿಸೋಣವೆಂದು ಅವರು ಹೇಳಿದರು. ಹಝ್ರತ್ ಅಬೂ ಉಬೈದ(ರ) ಹೇಳಿದರು: ನನ್ನ ಅಭಿಪ್ರಾಯ ಇದಕ್ಕೆ ತದ್ವಿರುದ್ಧವಾಗಿದೆ. ಏಕೆಂದರೆ, 20 ದಿನಗಳ ಕಾಲದ ಮುತ್ತಿಗೆ ಕಾರಣದಿಂದ ಡಮಸ್ಕಸ್ ನಿವಾಸಿಗಳು ತೊಂದರೆಗೆ ಒಳಪಟ್ಟಿದ್ದಾರೆ. ನಮ್ಮ ಭಯ ಅವರ ಹೃದಯಗಳಲ್ಲಿ ನುಗ್ಗಿದೆ. ನಾವು ಇಲ್ಲಿಂದ ಹೊರಟು ಹೋದರೆ, ಅವರಿಗೆ ಆರಾಮ ಲಭಿಸುವುದು. ಅವರು ಆಹಾರ ಪಾನೀಯದ ಸಾಮಾನುಗಳನ್ನು ಕೋಟೆಯೊಳಗೆ ಬಹಳಷ್ಟು ಸಂಗ್ರಹಿಸುವರು. ನಾವು ಅಜ್ನಾದೈನಿನಿಂದ ಇಲ್ಲಿಗೆ ಮರಳಿ ಬರುವಷ್ಟರಲ್ಲಿ ಈ ಜನರು ದೀರ್ಘ ಕಾಲದ ವರೆಗೆ ನಮ್ಮನ್ನು ಎದುರಿಸಲು ಸಮರ್ಥರಾಗುವರು.

ಹಝ್ರತ್ ಖಾಲಿದ್(ರ) ಹಝ್ರತ್ ಅಬೂಉಬೈದ(ರ)ರ ಅಭಿಪ್ರಾಯವನ್ನು ಒಪ್ಪಿಕೊಂಡು ಮುತ್ತಿಗೆಯನ್ನು ಮುಂದುವರೆಸಿದರು. ಡಮಸ್ಕಸಿನ ಕೋಟೆಯ ಬೇರೆ ಬೇರೆ ಬಾಗಿಲುಗಳ ಬಳಿ ನೇಮಿಸಲಾದ ಸೇನಾಧಿಪತಿಗಳೊಡನೆ ತಮ್ಮ ತಮ್ಮ ಕಡೆಯಿಂದ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಲು ಆದೇಶ ನೀಡಲಾಯಿತು.

ಹಝ್ರತ್ ಖಾಲಿದ್(ರ)ರ ಅದೇಶವನ್ನು ಪಾಲಿಸುತ್ತಾ ಎಲ್ಲ ಕಡೆಯಿಂದಲೂ ಇಸ್ಲಾಮಿನ ಸೈನ್ಯಗಳು ತೀವ್ರವಾದ ದಾಳಿಯನ್ನು ಆರಂಭಿಸಿದರು. ಹೀಗೆ ಡಮಸ್ಕಸ್ ಮುತ್ತಿಗೆಗೊಂಡು 21 ದಿನಗಳು ಕಳೆದುವು.

ದಾಳಿಯ ತೀವ್ರತೆಯನ್ನು ವರ್ಧಿಸಲು ಮುಸ್ಲಿಮರನ್ನು ಹುರಿದುಂಬಿಸುತ್ತಾ ಹಝ್ರತ್ ಖಾಲಿದ್(ರ) ಸ್ವತಃ ಜಾಬಿಯದ ಹೆಬ್ಬಾಗಿಲ ಕಡೆಯಿಂದ ತೀವ್ರವಾದ ದಾಳಿಯನ್ನು ಮುಂದುವರೆಸಿದರು. ಡಮಸ್ಕಸ್ ನಿವಾಸಿಗಳು ಅಷ್ಟರಲ್ಲಿ ಬಹಳ ತೊಂದರೆಗೆ ಒಳಪಟ್ಟಿದ್ದರು. ಹಿರ್ಕಲ್ ಅರಸನ ಸಹಾಯಕ್ಕಾಗಿ ಕಾಯುತ್ತಿದ್ದರು. ಹಝ್ರತ್ ಖಾಲಿದ್(ರ) ಒಂದರ ನಂತರ ಮತ್ತೊಂದು ಎಂಬಂತೆ ದಾಳಿಗಳನ್ನು ಮುಂದುವರೆಸಿಕೊಂಡರು. ಅವರು ಹೀಗೆಯೇ ಯುದ್ಧದಲ್ಲಿ ನಿರತರಾಗಿದ್ದಾಗ, ಗೋಡೆಯ ಮೇಲೆ ಇದ್ದ ರೋಮನರು ಅಚಾನಕ್ಕಾಗಿ ಚಪ್ಪಾಳೆ ತಟ್ಟುತ್ತಾ ಕುಣಿದಾಡುವುದಾಗಿಯೂ ಸಂತೋಷವನ್ನು ಪ್ರಕಟಿಸುತ್ತಿರುವುದಾಗಿಯೂ ಅವರು ಕಂಡರು. ಮುಸ್ಲಿಮರು

ಅಚ್ಚರಿಯಿಂದ ಅವರನ್ನು ನೋಡುತ್ತಿದ್ದರು. ಹಝ್ರತ್ ಖಾಲಿದ್(ರ) ಒಂದು ದಿಕ್ಕಿನ ಕಡೆಗೆ ನೋಡಿದಾಗ, ಆ ಕಡೆಯಿಂದ ಬಹಳವಾಗಿ ಧೂಳು ಏಳುತ್ತಿರುವುದಾಗಿ ಅವರು ಕಂಡರು. ಅದರ ಕಾರಣದಿಂದ ದಿನದ ಸಮಯವಾಗಿದ್ದರೂ ಆಕಾಶ ಇರುಳಾಗಿ ಕಾಣುತ್ತಿತ್ತು. ಅಂಧಕಾರ ಹರಡಿತ್ತು. ಡಮಸ್ಕಸ್ ನಿವಾಸಿಗಳ ನೆರವಿಗಾಗಿ ಹಿರ್ಖಲ್ ಅರಸನ ಸೈನ್ಯ ಬರುತ್ತಿದೆ ಎಂದು ಹಝ್ರತ್ ಖಾಲಿದ್(ರ)ರಿಗೆ ತಟ್ಟನೆ ಗೊತ್ತಾಯಿತು. ಸ್ವಲ್ಪ ಸಮಯದಲ್ಲೇ ಕೆಲವು ದೂತರು ಆ ಸುದ್ದಿಯು ಸರಿಯೆಂದು ದೃಢೀಕರಿಸಿದರು. ನಾವು ಪರ್ವತದ ಕಣಿವೆಯ ಬಳಿ ಒಂದು ದೊಡ್ಡ ಸೇನೆಯನ್ನು ಕಂಡಿದ್ದೇವೆ ಮತ್ತು ಅವರು ಖಂಡಿತವಾಗಿಯೂ ರೋಮನರ ಸೇನೆಯಾಗಿದೆ ಎಂದು ಅವರು ಹೇಳಿದರು. ಹಝ್ರತ್ ಖಾಲಿದ್(ರ) ಬೇಗನೇ ಬಂದು ಹಝ್ರತ್ ಅಬೂಉಬೈದರಿಗೆ ಸ್ಥಿತಿಗತಿಗಳ ಬಗ್ಗೆ ತಿಳಿಸುತ್ತಾ ಹೀಗೆ ಹೇಳಿದರು: ಪೂರ್ತಿ ಸೇನೆಯೊಂದಿಗೆ ಹರ್ಕಲ್ ಕಳುಹಿಸಿದ ಸೈನ್ಯವನ್ನು ಎದುರಿಸಲು ಹೋಗಲು ನಾನು ನಿರ್ಧರಿಸಿದ್ದೇನೆ.

ಇದರ ಕುರಿತು ನಿಮ್ಮ ಅಭಿಪ್ರಾಯವೇನು? ಹಝ್ರತ್ ಅಬೂಉಬೈದ(ರ) ಹೇಳಿದರು: ಇದು ಸರಿಯಲ್ಲ. ಏಕೆಂದರೆ, ನಾವು ಈ ಜಾಗವನ್ನು ಬಿಟ್ಟರೆ ಕೋಟೆಯೊಳಗಿನ ನಿವಾಸಿಗಳು ಹೊರಗೆ ಬಂದು ನಮ್ಮೊಡನೆ ಯುದ್ಧ ಮಾಡುವರು. ಒಂದು ಕಡೆಯಿಂದ ಹಿರ್ಕಲಿನ ಸೈನ್ಯ ದಾಳಿ ನಡೆಸುವುದು ಮತ್ತೊಂದು ಕಡೆಯಿಂದ ಡಮಸ್ಕಸ್ ನಿವಾಸಿಗಳು ದಾಳಿ ನಡೆಸುವರು. ನಾವು ರೋಮನರ ಎರಡು ಸೈನ್ಯಗಳ ನಡುವೆ ಸಿಲುಕಿ ವಿಪತ್ತಿಗೆ ತುತ್ತಾಗುವೆವು. ಹಾಗಾದರೆ ನಿಮ್ಮ ಅಭಿಪ್ರಾಯವೇನೆಂದು ಹಝ್ರತ್ ಖಾಲಿದ್(ರ) ಕೇಳಿದರು. ಹಝ್ರತ್ ಅಬೂಉಬೈದ(ರ) ಹೇಳಿದರು: ನೀವು ಒಬ್ಬ ಶೂರ ಮತ್ತು ಧೀರನಾದ ವ್ಯಕ್ತಿಯನ್ನು ಆಯ್ಕೆ ಮಾಡಿಕೊಂಡು, ಅವನ ಜೊತೆಗೆ ಒಂದು ಸಂಘವನ್ನು ಶತ್ರುಗಳನ್ನು ಎದುರಿಸಲು ಕಳುಹಿಸಿರಿ. (ಮರ್ದಾನೆ ಅರಬ್, ಭಾಗ-1, ಅಬ್ದುಸ್ಸತ್ತಾರ್ ಹಮ್ದಾನಿ, ಪುಟ-203-204, ಅಕ್ಬರ್ ಬುಕ್ ಸೇಲರ್ಸ್ ಲಾಹೋರ್) (ಫತೂಹ್ ಅಶ್ಶಾಮ್, ವಾಖದಿ, ಸಂಪುಟ-1, ಪುಟ-48)

ಹೀಗೆ ಹಝ್ರತ್ ಖಾಲಿದ್(ರ) ಹಝ್ರತ್ ಝಿರಾರ್ ಬಿನ್ ಅಝ್ವರ್(ರ)ರನ್ನು ಐನ್ನೂರು ಕುದುರೆ ಸವಾರರಾದ ಸೈನಿಕರೊಂದಿಗೆ ರೋಮನರ ಸೈನ್ಯವನ್ನು ಎದುರಿಸಲು ಕಳುಹಿಸಿದರು. ಮತ್ತೊಂದು ವರದಿಯಲ್ಲಿ ಸೈನಿಕರ ಸಂಖ್ಯೆ ಐದು ಸಾವಿರವಾಗಿತ್ತು ಎಂದೂ ಬಂದಿದೆ. ಹೇಗಿದ್ದರೂ ಹಝ್ರತ್ ಝಿರಾರ್(ರ) ಐನ್ನೂರು ಸಿಪಾಯಿಗಳೊಂದಿಗೆ ರೋಮನರ ಸೈನ್ಯದ ಕಡೆಗೆ ಹೊರಟರು. ರೋಮನರ ಸೈನ್ಯವನ್ನು ನೋಡಿಕೊಂಡು, ಇದಂತು ಬಹಳ ದೊಡ್ಡದಾದ ಸೈನ್ಯವಾಗಿದೆ ಮತ್ತು ನಾವು ಕೇವಲ 5 ಸಾವಿರ ಜನರಿದ್ದೇವೆ ಎಂದು ಕೆಲವು ಸಿಪಾಯಿಗಳು ಹಝ್ರತ್ ಝಿರಾರ್(ರ)ರೊಡನೆ ಹೇಳಿದರು. ಆದ್ದರಿಂದ ನಾವು ಮರಳಿ ಹೋಗಿ ನಮ್ಮ ಸೈನ್ಯದೊಂದಿಗೆ ಸೇರಿಕೊಂಡು ಅವರನ್ನು ಎದುರಿಸುವುದು ಉತ್ತಮವೆಂದು ಅವರು ಹೇಳಿದರು. ಹಝ್ರತ್ ಝಿರಾರ್(ರ) ಹೇಳಿದರು: ಶತ್ರುಗಳು ಅಧಿಕ ಸಂಖ್ಯೆಯಲ್ಲಿರುವುದನ್ನು ಕಂಡು ಭಯಗೊಳ್ಳಬೇಡಿರಿ. ಅಲ್ಲಾಹನು ಅನೇಕ ಬಾರಿ ಸ್ವಲ್ಪ ಜನರಿಗೆ ಅಧಿಕ ಜನರ ಮೇಲೆ ವಿಜಯ ನೀಡಿರುವನು. ಅವನು ಈಗಲೂ ನಮ್ಮ ಸಹಾಯವನ್ನು ಮಾಡುವನು. ಸ್ನೇಹಿತರೇ, ಮರಳಿ ಹೋಗುವುದೆಂದರೆ, ಯುದ್ಧದಿಂದ ಪರಾರಿಯಾಗುವುದಾಗಿದೆ. ಅದು ಅಲ್ಲಾಹನಿಗೆ ಇಷ್ಟವಲ್ಲ. ನೀವು ಅರೇಬಿಯರ ಧೈರ್ಯ ಮತ್ತು ತ್ಯಾಗಕ್ಕೆ ಕಳಂಕ ಉಂಟು ಮಾಡುವಿರಾ? ಮರಳಿ ಹೋಗಲು ಬಯಸುವವರು ಮರಳಿ ಹೋಗಲಿ. ಆದರೆ ನಾನು ಯುದ್ಧ ಮಾಡುವೆನು ಮತ್ತು ಇಸ್ಲಾಮಿನ ಹೆಸರನ್ನು ಮೇಲಕ್ಕೆತ್ತುವೆನು. ಅಲ್ಲಾಹನು ನನ್ನನ್ನು ಪರಾರಿಯಾಗುವುದಾಗಿ ಕಾಣದಿರಲಿ.

ಎಲ್ಲ ಮುಸ್ಲಿಮರು ಒಂದೇ ಸ್ವರದಲ್ಲಿ ಹೀಗೆ ಹೇಳಿದರು: ನಾವು ಇಸ್ಲಾಮಿಗಾಗಿ ಜೀವ ತ್ಯಾಗಮಾಡುವೆವು ಮತ್ತು ಶಹಾದತಿನ ಪದವಿಯನ್ನು ಗಳಿಸುವೆವು. ಎಂದರೆ, ನಾವು ಯುದ್ಧಕ್ಕಾಗಿ ತಯಾರಾಗಿದ್ದೇವೆ. ಹಝ್ರತ್ ಝಿರಾರ್(ರ) ಸಂತೋಷಗೊಂಡರು. ಶತ್ರುಗಳ ಮೇಲೆ ಒಂದೇ ಸವನೇ ದಾಳಿ ನಡೆಸಿಕೊಂಡು ಅವರ ಸರ್ವನಾಶ ಮಾಡಲು ಆಜ್ಞಾಪಿಸಿದರು. ಮುಸ್ಲಿಮರು ಮತ್ತು ಹಝ್ರತ್ ಝಿರಾರ್(ರ) ರೋಮನರ ಸೈನ್ಯದ ಮೇಲೆ ನಿರಂತರ ದಾಳಿ ನಡೆಸಿದರು ಮತ್ತು ಧೈರ್ಯದಿಂದ ಹೋರಾಡಿದರು. ರೋಮನರ ಸೇನಾಧಿಪತಿಯ ಪುತ್ರನು ಹಝ್ರತ್ ಝಿರಾರ್(ರ)ರ ಮೇಲೆ ಹಲ್ಲೆ ನಡೆಸಿದನು. ಅವರ ಎಡ ತೋಳಿನ ಮೇಲೆ ಈಟಿಯನ್ನು ಎಸೆದನು. ಅದರ ಕಾರಣದಿಂದ ತೋಳಿನಿಂದ ರಕ್ತ ವೇಗವಾಗಿ ಹರಿಯಲು ಆರಂಭಿಸಿತು. ಆದರೆ ಒಂದು ಕ್ಷಣದ ನಂತರ ಹಝ್ರತ್ ಝಿರಾರ್(ರ) ಅವನ ಎದೆಯ ಮೇಲೆ ಈಟಿಯನ್ನು ಎಸೆದು ವಧಿಸಿದರು. ಈಟಿ ಅವನ ಎದೆಯಲ್ಲಿ ಸಿಲುಕಿತು ಮತ್ತು ಅದರ ತುದಿ ಭಾಗ ತುಂಡಾಯಿತು. ತುದಿ ಭಾಗಯಿಲ್ಲದ ಈಟಿಯನ್ನು ಮಾತ್ರ ಹಿಡಿದುಕೊಂಡು ನಿರಾಯುಧರಾಗಿ ನಿಂತಿದ್ದ ಹಝ್ರತ್ ಝಿರಾರ್(ರ)ರನ್ನು ರೋಮನರ ಸೈನಿಕರು ಕಂಡಾಗ, ಅವರ ಬಳಿಗೆ ಬೇಗನೇ ಬಂದು ಅವರನ್ನು ಬಂಧಿಸಿದರು.

(ಇಸ್ಲಾಮಿ ಜಂಗೇಂ, ಪುಟ-123-125, ರಫೀಖ್ ಅಂಜುಮ್ ಮಕೀ, ದಾರುಲ್ ಕುತುಬ್ ಲಾಹೋರ್) (ಮರ್ದಾನೆ ಅರಬ್, ಭಾಗ-1, ಅಬ್ದುಸ್ಸತ್ತಾರ್ ಹಮ್ದಾನಿ, ಪುಟ-206, ಅಕ್ಬರ್ ಬುಕ್ ಸೇಲರ್ಸ್ ಲಾಹೋರ್)

ಹಝ್ರತ್ ಝಿರಾರ್(ರ) ಬಂಧಿಯಾದದ್ದನ್ನು ಕಂಡಾಗ ಸಹಾಬಿಯರು ಬಹಳ ದುಃಖಿತರೂ ಚಿಂತಿತರೂ ಆದರು. ಅವರು ಅನೇಕ ಸುರಕ್ಷಾ ದಾಳಿಗಳನ್ನು ನಡೆಸಿದರೂ ಅವರನ್ನು ಬಿಡಿಸಲಾಗಲಿಲ್ಲ. ಈ ಸುದ್ದಿ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರಿಗೆ ತಲುಪಿದಾಗ ಅವರು ಬಹಳ ಚಿಂತಿತರಾದರು. ಜೊತೆಗಾರರಿಂದ ರೋಮನರ ಸೈನ್ಯದ ಕುರಿತು ಮಾಹಿತಿ ಪಡೆದು ಕಮಾಂಡರ್ ಆಗಿದ್ದ ಹಝ್ರತ್ ಅಬೂ ಉಬೈದ(ರ)ರಿಂದ ದಾಳಿ ನಡೆಸುವುದರ ಕುರಿತು ಸಲಹೆ ಕೇಳಿದರು. ಅವರು ಹೇಳಿದರು: ಡಮಸ್ಕಸ್ ಮುತ್ತಿಗೆಗೆ ತಕ್ಕುದಾದ ಏರ್ಪಾಡು ಮಾಡಿಕೊಂಡು ನೀವು ಹಿರ್ಖಲಿನ ಸೈನ್ಯದ ಮೇಲೆ ದಾಳಿ ನಡೆಸಬಹುದಾಗಿದೆ. ಹಝ್ರತ್ ಖಾಲಿದ್(ರ) ಮುತ್ತಿಗೆ ಏರ್ಪಾಡು ಮಾಡಿಕೊಂಡ ನಂತರ ತನ್ನ ಜೊತೆಗಾರರ ಜೊತೆಗೆ ಶತ್ರುಗಳನ್ನು ಹಿಂಬಾಲಿಸಲು ಹೊರಟರು. ಶತ್ರುಗಳ ಸಮೀಪಕ್ಕೆ ತಲುಪಿದ ಕೂಡಲೇ ಅವರ ಮೇಲೆ ತಟ್ಟನೆ ದಾಳಿ ನಡೆಸಲು ಆಜ್ಞಾಪಿಸಿದರು. ಹಝ್ರತ್ ಖಾಲಿದ್(ರ) ಹೇಳಿದರು: ಶತ್ರುಗಳು ಹಝ್ರತ್ ಝಿರಾರ್(ರ)ರನ್ನು ವಧಿಸಿಲ್ಲವೆಂದಾದರೆ, ಖಂಡಿತ ನಾವು ಅವರನ್ನು ಬಿಡುಗಡೆಗೊಳಿಸುವೆವು. ಹಝ್ರತ್ ಝಿರಾರ್(ರ) ಶಹೀದ್ ಆಗಿರುವರಾದರೆ, ಅಲ್ಲಾಹನಾಣೆ, ನಾವು ಖಂಡಿತ ಪ್ರತೀಕಾರ ಪಡೆಯುವೆವು. ಹೇಗಿದ್ದರೂ ಹಝ್ರತ್ ಝಿರಾರ್(ರ)ರ ಕುರಿತು ದುಃಖ ವಾರ್ತೆ ಲಭಿಸತು ಎಂದು ನನಗೆ ಪ್ರತೀಕ್ಷೆಯಿದೆ.

ಇದೇ ವೇಳೆ ಮುಸ್ಲಿಮರ ಸೈನ್ಯದ ಮುಂದೆ ಮುಂದೆಯಾಗಿ ಕೆಂಪು ಕುದುರೆಯಲ್ಲಿ ಸವಾರರಾಗಿಕೊಂಡು, ಯುದ್ಧ ಕವಚದ ಮೇಲೆ ಬಟ್ಟೆಯನ್ನು ಧರಿಸಿದ್ದ ಅಪರಿಚಿತನಾದ ಒಬ್ಬ ಕುದುರೆ ಸವಾರ ಕಂಡುಬಂತು. ಆ ವ್ಯಕ್ತಿಯ ಕೈಯಲ್ಲಿ ಉದ್ದದ ಹೊಳೆಯುವ ಈಟಿಯಿತ್ತು. ಆ ವ್ಯಕ್ತಿಯ ವೇಷ ವಿನ್ಯಾಸಗಳಿಂದ ಧೈರ್ಯ, ಬುದ್ಧಿವಂತಿಕೆ, ಯುದ್ಧ ನಿಪುಣತೆ ಸ್ಪಷ್ಟವಾಗಿ ಕಾಣಬಹುದಾಗಿತ್ತು.

ದೇಹವನ್ನು ಪೂರ್ತಿಯಾಗಿ ಮತ್ತು ಮುಖವನ್ನು ಮರೆಸಿಕೊಂಡಿದ್ದ ಆ ಕುದುರೆ ಸವಾರ ಯಾರೆಂದು ಗೊತ್ತಾದರೆ ಎಷ್ಟು ಚೆನ್ನ, ಅಲ್ಲಾಹನಾಣೆ, ಈ ವ್ಯಕ್ತಿ ಅತ್ಯಂತ ಧೈರ್ಯಶಾಲಿ ಮತ್ತು ಶೂರನೆಂದು ತೋರುತ್ತದೆ ಎಂದು ಹಝ್ರತ್ ಖಾಲಿದ್(ರ) ಹೇಳಿದರು. ಎಲ್ಲರೂ ಆ ವ್ಯಕ್ತಿಯ ಹಿಂದೆಯಿದ್ದರು. ಇಸ್ಲಾಮಿನ ಸೈನ್ಯ ಸತ್ಯನಿಷೇಧಿಗಳ ಸಮೀಪಕ್ಕೆ ತಲುಪಿದಾಗ, ಪಕ್ಷಿಗಳ ಮೇಲೆ ಹದ್ದು ಹಲ್ಲೆ ನಡೆಸುವ ರೀತಿಯಲ್ಲಿ ಆ ವ್ಯಕ್ತಿ ಅವರ ಮೇಲೆ ಶೌರ್ಯದಿಂದ ದಾಳಿ ನಡೆಸಿದ. ಮಾತ್ರವಲ್ಲ, ಆ ವ್ಯಕ್ತಿಯ ಒಂದು ದಾಳಿಯಿಂದ ಶತ್ರುಗಳ ಸೈನ್ಯ ಕಂಗಾಲಾಯಿತು. ಆ ವ್ಯಕ್ತಿ ಅನೇಕರನ್ನು ವಧಿಸಿದ. ಮುಂದಕ್ಕೆ ಹೋಗುತ್ತಾ ಶತ್ರು ಸೈನ್ಯದ ಮಧ್ಯಭಾಗಕ್ಕೆ ತಲುಪಿದ. ಆ ವ್ಯಕ್ತಿ ತನ್ನ ಜೀವವನ್ನು ಪಣತೊಟ್ಟು ಸತ್ಯನಿಷೇಧಿಗಳ ಸೈನ್ಯವನ್ನು ಮುರಿಯುತ್ತಾ ಒಳಗೆ ನುಗ್ಗಿದ. ಮುಂದೆ ಬಂದವರನ್ನು ತುಂಡುತುಂಡನ್ನಾಗಿ ಮಾಡಿದ. ಆ ವ್ಯಕ್ತಿ ಖಾಲಿದೇ ಆಗಿರಬೇಕೆಂದು ಕೆಲವರು ಭಾವಿಸಿದರು. ಆ ವ್ಯಕ್ತಿ ಯಾರೆಂದು ಹಝ್ರತ್ ರಾಫೀ(ರ) ಹಝ್ರತ್ ಖಾಲಿದ್(ರ)ರೊಡನೆ ಕೇಳಿದರು. ಹಝ್ರತ್ ಖಾಲಿದ್(ರ) ಹೇಳಿದರು: ನನಗೆ ಗೊತ್ತಿಲ್ಲ, ಇದು ಯಾರೆಂದು ಯೋಚಿಸಿ ನಾನೇ ಅಚ್ಚರಿಯಲ್ಲಿದ್ದೇನೆ.

ಹಝ್ರತ್ ಖಾಲಿದ್(ರ)ರ ಸೈನ್ಯ ಮುಂದೆ ಇರುವಾಗಲೇ ಆ ವ್ಯಕ್ತಿ ಪುನಃ ರೋಮನರ ಸೈನ್ಯದಿಂದ ಹೊರಗೆ ಬಂದರು. ರೋಮನರ ಯಾವುದೇ ಸಿಪಾಯಿ ಅವರ ಮುಂದೆ ಬರುತ್ತಿರಲಿಲ್ಲ. ಆ ವ್ಯಕ್ತಿ ಏಕಾಂಗಿಯಾಗಿ ಹೋರಾಡುತ್ತಾ ರೋಮನರ ನಡುವೆ ಯುದ್ಧ ಮಾಡುತ್ತಿದ್ದ. ಅದೇ ವೇಳೆ ಹಝ್ರತ್ ಖಾಲಿದ್(ರ) ದಾಳಿ ನಡೆಸಿ ಆ ವ್ಯಕ್ತಿಯನ್ನು ಶತ್ರುಗಳ ವಲಯದಿಂದ ಹೊರಗೆ ತಂದರು. ಹೀಗೆ ಆ ವ್ಯಕ್ತಿ ಇಸ್ಲಾಮಿನ ಸೈನ್ಯದಲ್ಲಿ ಬಂದು ಸೇರಿದ. ಹಝ್ರತ್ ಖಾಲಿದ್(ರ) ಹೇಳಿದರು: ಎಲೈ ಅಲ್ಲಾಹನ ದಾಸ, ನೀವು ನನ್ನನ್ನು ಮತ್ತು ಎಲ್ಲ ಮುಸ್ಲಿಮರನ್ನು ಅಚ್ಚರಿಪಡಿಸಿರುವೆ. ನೀವು ಇಷ್ಟು ನಿರ್ಭೀತರಾಗಿರುವೆ. ಅಷ್ಟಕ್ಕೂ ನೀವು ಯಾರು? ಅವರ ಒತ್ತಾಯ ಪೂರ್ವಕವಾಗಿ ಕೇಳಿದಾಗ, ಆ ವ್ಯಕ್ತಿ ಹೇಳಿದ: ನಾನು ಅನುಸರಣೆ ಇಲ್ಲದ ಕಾರಣದಿಂದ ಮುಖ ತಿರುಗಿಸಿದ್ದು ಅಲ್ಲ. ಬದಲಾಗಿ ನನಗೆ ನಾಚಿಕೆಯಾಗುತ್ತಿದೆ. ಏಕೆಂದರೆ, ನಾನು ಪುರುಷನಲ್ಲ, ಬದಲಾಗಿ ಸ್ತ್ರೀಯಾಗಿರುವೆ.

ನನ್ನ ನೋವುಭರಿತ ಹೃದಯ ನನ್ನನ್ನು ಈ ಯುದ್ಧ ಮೈದಾನಕ್ಕೆ ಇಳಿಸಿದೆ. ನಾನು ಝಿರಾರಿನ ಸಹೋದರಿ ಖೌಲ ಬಿನ್ತ್ ಅಝ್ವರ್

ಆಗಿರುವೆ. ಸಹೋದರನ ಬಂಧನದ ಬಗ್ಗೆ ಗೊತ್ತಾದಾಗ, ನೀವು ಈಗ ನೋಡಿದ್ದನ್ನು ಮಾಡಲು ಬಂದೆ. ಹಝ್ರತ್ ಖಾಲಿದ್(ರ) ಹೇಳಿದರು: ನಾವೆಲ್ಲರೂ ಸೇರಿ ಒಟ್ಟಾಗಿ ದಾಳಿ ನಡೆಸಬೇಕು. ಝಿರಾರ್‌ನನ್ನು ಬಂಧನದಿಂದ ಅಲ್ಲಾಹನು ಮುಕ್ತಗೊಳಿಸುವನು ಎಂದು ಅವನ ಮೇಲೆ ನನಗೆ ಭರವಸೆಯಿದೆ. ಹಝ್ರತ್ ಖೌಲ(ರ) ಹೇಳಿದರು: ನಾನು ಕೂಡ ದಾಳಿ ನಡೆಸುವುದರಲ್ಲಿ ಮುಂದೆ ಮುಂದೆ ಆಗಿರುತ್ತೇನೆ. ಅನಂತರ ಹಝ್ರತ್ ಖಾಲಿದ್(ರ)ರ ಸಮರ್ಥವಾದ ದಾಳಿಯ ಪರಿಣಾಮವಾಗಿ ರೋಮನರು ದುರ್ಬಲಗೊಂಡರು. ಅವರ ಸೈನ್ಯ ಅಲ್ಲೋಲ ಕಲ್ಲೋಲಗೊಂಡಿತು. ಹಝ್ರತ್ ರಾಫಿಅ್(ರ) ಧೈರ್ಯದ ಕೌಶಲವನ್ನು ಪ್ರಕಟಿಸಿದರು. ಮುಸ್ಲಿಮರು ಪುನಃ ಸಮರ್ಥವಾದ ದಾಳಿ ನಡೆಸಲು ತಯಾರು ಆಗಿದ್ದರು. ಅಷ್ಟರಲ್ಲಿ ಅಚಾನಕ್ಕಾಗಿ ಸತ್ಯನಿಷೇಧಿಗಳ ಸೈನ್ಯದಿಂದ ಕೆಲವು ಸವಾರರು ತ್ವರಿತವಾಗಿ ಅಭಯ ಯಾಚಿಸಲು ಬಂದರು. ಹಝ್ರತ್ ಖಾಲಿದ್(ರ) ಹೇಳಿದರು: ಅವರಿಗೆ ಅಭಯ ನೀಡಿರಿ ಮತ್ತು ನನ್ನ ಬಳಿಗೆ ತನ್ನಿರಿ. ಅನಂತರ ನೀವು ಯಾರೆಂದು ಹಝ್ರತ್ ಖಾಲಿದ್(ರ) ಅವರೊಡನೆ ಕೇಳಿದರು. ಅವರು ಹೇಳಿದರು: ನಾವು ರೋಮಿನ ಸೈನ್ಯದ ಜನರಾಗಿದ್ದೇವೆ ಮತ್ತು ಹಿಮಸ್ ನಿವಾಸಿಗಳಾಗಿದ್ದೇವೆ ಹಾಗೂ ನಾವು ಸಂಧಾನವನ್ನು ಬಯಸುತ್ತೇವೆ. ಹಝ್ರತ್ ಖಾಲಿದ್(ರ) ಹೇಳಿದರು: ಸಂಧಾನವಂತು ಹಿಮಸ್ ತಲುಪಿದ ನಂತರ ಆಗುವುದು. ಇಲ್ಲಿ ಸಮಯಕ್ಕೆ ಮುಂಚಿತವಾಗಿ ನಾವು ಸಂಧಾನ ಮಾಡುವಂತಿಲ್ಲ. ಆದರೂ ನಿಮಗೆ ನಾವು ಅಭಯ ನೀಡಿದ್ದೇವೆ. ಅಲ್ಲಾಹನ ತೀರ್ಮಾನದಂತೆ ನಾವು ಜಯಿಸುವಾಗ ಅಲ್ಲಿ ಈ ಕುರಿತು ಮಾತುಕತೆ ನಡೆಯುವುದು. ನಿಮ್ಮ ಸರದಾರನ ಮಗನನ್ನು ವಧಿಸಿದ ನಮ್ಮೊಬ್ಬ ವೀರನ ಕುರಿತು ನಿಮಗೆ ಗೊತ್ತಿದೆಯೇ? ಅವರು ಹೇಳಿದರು: ಯುದ್ಧ ಕವಚವನ್ನು ಕೂಡ ಧರಿಸದೇ ನಮ್ಮ ಅನೇಕ ಜನರನ್ನು ವಧಿಸಿದ ಮತ್ತು ನಮ್ಮ ಸರದಾರನ ಪುತ್ರನನ್ನು ವಧಿಸಿದ ವ್ಯಕ್ತಿಯು ಬಗ್ಗೆ ಪ್ರಶ್ನಿಸುತ್ತಿದ್ದೀರಾ? ಹೌದು ಅವರ ಕುರಿತೇ ಎಂದು ಹಝ್ರತ್ ಖಾಲಿದ್(ರ) ಹೇಳಿದರು. ಅವರು ಹೇಳಿದರು: ಅವರನ್ನು ಬಂಧಿಸಿ ವರ್ದಾನಿನ ಬಳಿಗೆ ತಲುಪಿಸಲಾದಾಗ, ವರ್‌ದಾನ್ ಅವರನ್ನು ನೂರು ಸವಾರರ ಜೊತೆಗೆ ಅರಸನ ಬಳಿಗೆ ತಲುಪಿಸಲು ಹಿಮಸಿಗೆ ಕಳುಹಿಸಿದನು.

ಇದನ್ನು ಆಲಿಸಿ ಹಝ್ರತ್ ಖಾಲಿದ್(ರ) ಬಹಳ ಸಂತೋಷಗೊಂಡರು. ಹಝ್ರತ್ ರಾಫಿಅ್(ರ)ರೊಡನೆ ಹಝ್ರತ್ ಖಾಲಿದ್(ರ) ಹೇಳಿದರು: ನಿಮಗೆ ಇಲ್ಲಿಯ ರಸ್ತೆಗಳ ಬಗ್ಗೆ ಅರಿವಿದೆ. ಆದ್ದರಿಂದ ನಿಮ್ಮ ಇಷ್ಟ ಪ್ರಕಾರ ಕೆಲವು ಯುವಕರನ್ನು ಕೊಂಡು ಹೋಗಿ, ಶತ್ರುಗಳು ಹಿಮಸ್ ತಲುಪುವುದಕ್ಕೆ ಮುಂಚಿತವಾಗಿ ಹಝ್ರತ್ ಝಿರಾರ್(ರ)ರನ್ನು ಬಂಧನ ಮುಕ್ತಗೊಳಿಸಿರಿ ಮತ್ತು ತನ್ನ ಪ್ರಭುವಿನಿಂದ ಪ್ರತಿಫಲ ಪಡೆಯಿರಿ. ಹಝ್ರತ್ ರಾಫಿ(ರ) ನೂರು ಯುವಕರನ್ನು ಆಯ್ಕೆ ಮಾಡಿದರು ಮತ್ತು ಅವರು ಹೋಗುವಷ್ಟರಲ್ಲಿ, ಅವರ ಜೊತೆಗೆ ಹೋಗಲು ಬಹಳವಾಗಿ ವಿನಂತಿ ಮಾಡುತ್ತಾ ಹಝ್ರತ್ ಖೌಲ(ರ) ಅನುಮತಿ ಪಡೆದರು. ಎಲ್ಲರೂ ಹಝ್ರತ್ ರಾಫಿ(ರ)ರ ನೇತೃತ್ವದಲ್ಲಿ ಹಝ್ರತ್ ಝಿರಾರ್(ರ)ರನ್ನು ಬಿಡುಗಡೆಗೊಳಿಸಲು ಹೊರಟರು. ಹಝ್ರತ್ ರಾಫಿ(ರ) ವೇಗವಾಗಿ ಹೊರಟು ಒಂದು ಸ್ಥಳಕ್ಕೆ ತಲುಪಿದಾಗ ತನ್ನ ಜೊತೆಗಾರರರೊಡನೆ ಹೇಳಿದರು: ಖುಶಿಪಡಿರಿ, ಶತ್ರುಗಳು ಬಹು ದೂರಕ್ಕೆ ಹೋಗಿಲ್ಲ. ಹಝ್ರತ್ ರಾಫಿ(ರ) ತನ್ನ ಒಂದು ಸೈನ್ಯದ ತುಕಡಿಯನ್ನು ಅಲ್ಲಿ ಅಡಗಿಸಿ ನಿಲ್ಲಿಸಿದರು. ಅಷ್ಟರಲ್ಲಿ ಧೂಳು ಏಳುವುದಾಗಿ ಕಂಡುಬಂತು. ಹುಶಾರಾಗಿರಲು ಹಝ್ರತ್ ರಾಫಿ(ರ) ಮುಸ್ಲಿಮರೊಡನೆ ಹೇಳಿದರು. ಅನಂತರ ಮಾಡಿದ ದಾಳಿಯ ಮೂಲಕ ಹಝ್ರತ್ ಝಿರಾರ್(ರ)ರನ್ನು ಬಂಧನದಿಂದ ಮುಕ್ತಗೊಳಿಸಿದರು. ಮುಸ್ಲಿಮರು ತಯಾರಾಗಿ ಕುಳಿತಿದ್ದಾಗ ರೋಮನರು ಅಲ್ಲಿಗೆ ತಲುಪಿದರು. ಹಝ್ರತ್ ಝಿರಾರ್(ರ) ಬಂಧನದಲ್ಲಿದ್ದರು. ನೋವುಭರಿತ ಶೈಲಿಯಲ್ಲಿ ಪದ್ಯಗಳನ್ನು ಹೀಗೆ ಹಾಡುತ್ತಿದ್ದರು: ನಾನು ಬಂಧನದಲ್ಲಿದ್ದೇನೆ ಮತ್ತು ನನ್ನನ್ನು ಕಟ್ಟಿಡಲಾಗಿದೆ. ಯುದ್ಧ ಕವಚವನ್ನು ಧರಿಸಿ ಸಿರಿಯದ ಸತ್ಯನಿಷೇಧಿಗಳು ಮತ್ತು ಅಧರ್ಮಿಗಳು ನನ್ನ ಸುತ್ತವಿರುವರು ಎಂಬ ಸುದ್ದಿಯನ್ನು ಎಲೈ ದೂತ, ನನ್ನ ಸಮುದಾಯ ಮತ್ತು ನನ್ನ ಸಹೋದರಿ ಖೌಲರಿಗೆ ಮುಟ್ಟಿಸು. ಎಲೈ ಹೃದಯವೇ, ನೀನು ದುಃಖದಿಂದ ಸಾಯು, ಎಲೈ ಕಣ್ಣೀರು, ನನ್ನ ಮುಖದಲ್ಲಿ ಹರಿಯು. ಹಝ್ರತ್ ಖೌಲ(ರ) ಜೋರಾಗಿ ಹೇಳಿದರು: ನಿನ್ನ ದುಆ ಸ್ವೀಕಾರವಾಗಿದೆ. ಅಲ್ಲಾಹನ ಸಹಾಯ ಬಂದಿದೆ. ನಾನು ನಿಮ್ಮ ಸಹೋದರಿ ಖೌಲ ಆಗಿರುವೆ. ಹೀಗೆ ಹೇಳಿ ತಕ್ಬೀರ್ ಹೇಳುತ್ತಾ ದಾಳಿ ಮಾಡಿದರು. ಇತರ ಮುಸ್ಲಿಮರು ಕೂಡ ತಕ್ಬೀರ್ ಹೇಳುತ್ತಾ ದಾಳಿ ನಡೆಸಿದರು.

ಮುಸ್ಲಿಮರು ಆ ಸಂಘವನ್ನು ವಶಪಡಿಸಿಕೊಂಡರು. ಎಲ್ಲರನ್ನು ಕೊಲ್ಲಲಾಯಿತು. ಅಲ್ಲಾಹನ ಅನುಗ್ರಹದಿಂದ ಹಝ್ರತ್ ಝಿರಾರ್(ರ)ರಿಗೆ ಬಿಡುಗಡೆ ಮತ್ತು ಮುಸ್ಲಿಮರಿಗೆ ಯುದ್ಧ ಸಂಪತ್ತು ಲಭಿಸಿತು. ಹಝ್ರತ್ ಖೌಲ(ರ) ತನ್ನ ಕೈಗಳಿಂದ ಸಹೋದರನಿಗೆ ಕಟ್ಟಲಾದ ಹಗ್ಗವನ್ನು ಬಿಚ್ಚಿದರು ಮತ್ತು ಸಲಾಂ ಹೇಳಿದರು. ಹಝ್ರತ್ ಝಿರಾರ್(ರ) ತನ್ನ ಸಹೋದರಿಯೊಡನೆ ಶಾಬಾಶ್ ಎಂದು ಹೇಳಿ ಸ್ವಾಗತಿಸಿದರು. ಒಂದು ದೊಡ್ಡ ಈಟಿಯನ್ನು ಕೈಯಲ್ಲಿ ಹಿಡಿದು ಕುದುರೆಯಲ್ಲಿ ಸವಾರರಾದರು. ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರು. ಈ ಕಡೆ ಈ ಸಂತೋಷದ ಘಟನೆ ನಡೆಯಿತು. ಮತ್ತೊಂದೆಡೆ ಡಮಸ್ಕಸಿನಲ್ಲಿ ಹಝ್ರತ್ ಖಾಲಿದ್(ರ) ತೀವ್ರವಾದ ದಾಳಿ ನಡೆಸಿ ವರ್‌ದಾನನ್ನು ಸೋಲಿಸಿದರು. ಸೈನಿಕರು ಓಡಿ ಹೋದರು ಮತ್ತು ಮುಸ್ಲಿಮರು ಅವರನ್ನು ಹಿಂಬಾಲಿಸಿದರು. ಹಝ್ರತ್ ಝಿರಾರ್(ರ) ಇತರ ಮುಸ್ಲಮರನ್ನು ಭೇಟಿಯಾದರು. ವಿಜಯದ ಸುದ್ದಿಯನ್ನು ಹಝ್ರತ್ ಅಬೂ ಉಬೈದ(ರ)ರಿಗೆ ಮುಟ್ಟಿಸಲಾಯಿತು. ಈಗ ಡಮಸ್ಕಸನ್ನು ಜಯಿಸಲಾಗುವುದು ಎಂದು ಮುಸ್ಲಿಮರಿಗೆ ಖಾತರಿಯಾಯಿತು. (ಫುತೂಹಾತೆ ಶಾಮ್, ಫಝುಲ್ ಮುಹಮ್ಮದ್ ಯೂಸುಫ್ ಝುಈ, ಪುಟ–75–81, ಮಕ್ತಬ ಈಮಾನ್ ವ ಯಖೀನ್)

ಮತ್ತೊಂದೆಡೆ ಇಸ್ಲಾಮಿನ ಸೈನ್ಯ ಡಮಸ್ಕಸಿನಲ್ಲಿ ಇತ್ತು. ಕೋಟೆಯ ಮುತ್ತಿಗೆ ಜಾರಿಯಲ್ಲಿರುವಾಗಲೇ ಹಝ್ರತ್ ಉಬಾದ ಬಿನ್ ಸಈದ್(ರ) ಹಝ್ರತ್ ಖಾಲಿದ್(ರ)ರ ಬಳಿಗೆ ಬಂದು ಹೀಗೆ ತಿಳಿಸಿದರು: ರೋಮನರ ತೊಂಬತ್ತು ಸಾವಿರ ಸೈನಿಕರು ಅಜ್ನಾದೈನಿನಲ್ಲಿ ಬಂದು ಸೇರಿರುವರು. ಹಝ್ರತ್ ಖಾಲಿದ್(ರ) ಹಝ್ರತ್ ಅಬೂ ಉಬೈದ(ರ)ರೊಡನೆ ಸಲಹೆ ಕೇಳಿದಾಗ, ಅವರು ಹೇಳಿದರು: ನಮ್ಮ ಸೇನೆಗಳು ಸಿರಿಯ ದೇಶದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿವೆ. ಆದ್ದರಿಂದ ಅಜ್ನಾದೈನಿನಲ್ಲಿ ನಮ್ಮನ್ನು ಬಂದು ಭೇಟಿಯಾಗಲು ಅವರೆಲ್ಲರಿಗೂ ಪತ್ರ ಬರೆಯಿರಿ. ನಾವು ಸಹ ಈಗ ಡಮಸ್ಕಸಿನ ಕೋಟೆಯ ಮುತ್ತಿಗೆಯನ್ನು ಉಪೇಕ್ಷಿಸಿ ಅಜ್ನಾದೈನಿನ ಕಡೆಗೆ ಹೋಗುವೆವು. (ಮರ್ದಾನೆ ಅರಬ್, ಭಾಗ–1, ಅಬ್ದುಸ್ಸತ್ತಾರ್ ಹಮ್ದಾನಿ, ಪುಟ–214, ಅಕ್ಬರ್ ಬುಕ್ ಸೇಲರ್ಸ್ ಲಾಹೋರ್)

ಹಿರ್ಕಲ್‌ನಿಗೆ ವರ್‌ದಾನಿನ ಪರಾಜಯದ ಸುದ್ದಿ ತಲುಪಿತ್ತು ಮತ್ತು ಅವನ ಮಗನ ಕೊಲೆಯ ವಿಶದ ವಿವರಣೆ ಲಭಿಸಿತ್ತು. ಆದ್ದರಿಂದ ಹಿರ್ಕಲ್ ಬೈಯುತ್ತಾ ವರ್‌ದಾನಿಗೆ ಹೀಗೆ ಪತ್ರ ಬರೆದರು: ನಗ್ನರೂ ಹಸಿದವರೂ ಆದ ಅರೇಬಿಯರು ನಿಮ್ಮನ್ನು ಸೋಲಿಸಿರುವರು ಮತ್ತು ನಿನ್ನ ಮಗನನ್ನು ವಧಿಸಿರುವರು ಎಂಬ ಸುದ್ದಿ ನನಗೆ ತಲುಪಿದೆ. ಮಸೀಹ್ ಅವನ ಮೇಲೆಯೂ ಕರುಣೆದೋರಲಿಲ್ಲ, ನಿನ್ನ ಮೇಲೆಯೂ ಕರುಣೆದೋರಲಿಲ್ಲ. ನಿನ್ನ ಶೌರ್ಯ ಮತ್ತು ನಿನ್ನ ಖಡ್ಗ ಚಲಾಯಿಸುವ ಕೌಶಲ ಜನರೆಡೆಯಲ್ಲಿ ಪ್ರಸಿದ್ಧಿ ಪಡೆಯದೇ ಇರುತ್ತಿದ್ದರೆ, ನಾನು ನಿನ್ನನ್ನು ಕೊಲ್ಲುತ್ತಿದ್ದೆ. ಆದದ್ದು ಆಗಿ ಹೋಯಿತು. ಈಗ ನಾನು 90 ಸಾವಿರ ಸೈನಿಕರ ಸೇನೆಯನ್ನು ಕಳುಹಿಸಿದ್ದೇನೆ. ನಿನ್ನನ್ನು ಅದರ ಸರದಾರನನ್ನಾಗಿ ನೇಮಿಸಿದ್ದೇನೆ. (ಫುತೂಹಾತೆ ಶಾಮ್, ಫಝುಲ್ ಮುಹಮ್ಮದ್ ಯೂಸುಫ್ ಝುಈ, ಪುಟ–81, ಮಕ್ತಬ ಈಮಾನ್ ವ ಯಖೀನ್)

ಹಝ್ರತ್ ಖಾಲಿದ್(ರ) ಡಮಸ್ಕಸ್ ಮುತ್ತಿಗೆಯನ್ನು ಕೊನೆಗೊಳಿಸಿ ಅಜ್ನಾದೀನಿನ ಕಡೆಗೆ ಹೊರಡಲು ಸೈನಿಕರಿಗೆ ಆದೇಶ ನೀಡಿದರು. ಆಜ್ಞೆ ಲಭಿಸಿದ ಕೂಡಲೇ ಮುಸ್ಲಿಮರು ಡೇರೆಗಳನ್ನು ಕಿತ್ತೆಗೆದು ಇತರ ಸಾಮಾನುಗಳನ್ನು ಒಂಟೆಗಳ ಮೇಲೆ ಇರಿಸಲು ಆರಂಭಿಸಿದರು. ಯುದ್ಧ ಸಂಪತ್ತಿನ ಮತ್ತು ಇತರ ಸಾಮಾನುಗಳ ಒಂಟೆಗಳನ್ನು ಮಹಿಳೆಯರು ಮತ್ತು ಮಕ್ಕಳ ಜೊತೆಗೆ ಸೈನ್ಯದ ಹಿಂದಿನ ಭಾಗದಲ್ಲಿ ಇರಿಸಲಾಯಿತು ಮತ್ತು ಇತರ ಸವಾರರು ಸೈನ್ಯದ ಮುಂದೆ ಹೋಗುತ್ತಿದ್ದರು. ಹಝ್ರತ್ ಖಾಲಿದ್(ರ) ಹೇಳಿದರು: ನಾನು ಮಹಿಳೆಯರು ಮತ್ತು ಮಕ್ಕಳ ಸಂಘದೊಂದಿಗೆ ಸೈನ್ಯದ ಹಿಂದಿನ ಭಾಗದಲ್ಲಿ ಇರುವುದು ಸಮಂಜಸವೆಂದಾಗಿದೆ ನನ್ನ ಅಭಿಪ್ರಾಯ. ಹಝ್ರತ್ ಅಬೂ ಉಬೈದ(ರ) ಹೇಳಿದರು: ವರ್ದಾನ್ ತನ್ನ ಸೈನ್ಯದೊಂದಿಗೆ ಅಜ್ನಾದೀನಿನಿಂದ ಡಮಸ್ಕಸ್ ಕಡೆಗೆ ಬಹುಶಃ ಹೊರಟಿರಬಹುದು ಮತ್ತು ಅವರೊಡನೆ ನಮ್ಮ ಮುಖಾಮುಖಿಯಾಗಲು ಸಾಧ್ಯತೆಯಿದೆ. ನೀವು ಸೈನ್ಯದ ಮುಂದೆ ಇರುವವರಾದರೆ, ನೀವು ಅವರನ್ನು ತಡೆಯಬಹುದು ಮತ್ತು ಅವರನ್ನು ಎದುರಿಸಬಹುದು. ಆದ್ದರಿಂದ ನೀವು ಮುಂದೆ ಇರಿ ಮತ್ತು ನಾನು ಹಿಂದೆ ಇರುತ್ತೇನೆ. ಹಝ್ರತ್ ಖಾಲಿದ್(ರ) ಹೇಳಿದರು: ನಿಮ್ಮ ಅಭಿಪ್ರಾಯ ಸರಿ. ನಾನು ನಿಮ್ಮ ಅಭಿಪ್ರಾಯಕ್ಕೆ ಎದುರಾಗಿ ಹೋಗಲಾರೆನು. ಇಸ್ಲಾಮಿನ ಸೈನ್ಯ ಡಮಸ್ಕಸಿನ ಮುತ್ತಿಗೆಯನ್ನು ಉಪೇಕ್ಷಿಸಿ ಹೊರಡುವುದನ್ನು ಡಮಸ್ಕಸ್ ನಿವಾಸಿಗಳು ನೋಡಿದಾಗ, ಅವರು ಸಂತೋಷದಿಂದ ಕುಣಿದಾಡಲು ಆರಂಭಿಸಿದರು. ಚಪ್ಪಾಳೆ ತಟ್ಟಿ ತಮ್ಮ ಸಂತೋಷವನ್ನು ಪ್ರಕಟಿಸುತ್ತಿದ್ದರು. ಇಸ್ಲಾಮಿನ ಸೈನ್ಯ ಹೊರಡುವುದರ ಬಗ್ಗೆ ಡಮಸ್ಕಸ್ ನಿವಾಸಿಗಳು ತಮ್ಮ ಅನೇಕ ಅಭಿಪ್ರಾಯಗಳನ್ನು ಪ್ರಕಟಿಸುತ್ತಿದ್ದರು. ಅಜ್ನಾದೀನಿನಲ್ಲಿ ನಮ್ಮ ಮಹತ್ತಾದ ಸೈನ್ಯ ಒಟ್ಟುಗೂಡಿದ್ದಾಗಿ ಸುದ್ದಿ ತಲುಪಿದ ಕಾರಣದಿಂದ ಮುಸ್ಲಿಮರು ಸಿರಿಯದಲ್ಲಿರುವ ತಮ್ಮ ಇತರ ಸೈನ್ಯದೊಂದಿಗೆ ಸೇರಲು

ಹೋಗುತ್ತಿದ್ದಾರೆ ಎಂದು ಕೆಲವರು ಹೇಳಿದರು. ಮುತ್ತಿಗೆಯಿಂದ ಬೇಸತ್ತು ಬೇರೆ ಜಾಗದಲ್ಲಿ ಯುದ್ಧ ಮಾಡಲು ಹೋಗುತ್ತಿದ್ದಾರೆ ಎಂದು ಕೆಲವರು ಹೇಳಿದರು. (ಮರ್ದಾನೆ ಅರಬ್, ಭಾಗ-1, ಅಬ್ದುಸ್ಸತ್ತಾರ್ ಹಮ್ದಾನಿ, ಪುಟ-216-217, ಅಕ್ಬರ್ ಬುಕ್ ಸೇಲರ್ಸ್ ಲಾಹೋರ್)

ಮದೀನಕ್ಕೆ ಮರಳಿ ಓಡಿ ಹೋಗುತ್ತಿದ್ದಾರೆ ಎಂದು ಕೂಡ ಕೆಲವರು ಹೇಳಿದರು. ಹಿರ್ಕಲಿನ ಅತ್ಯಂತ ವಿಶ್ವಸ್ತ ಮತ್ತು ಉನ್ನತ ಮಟ್ಟದ ಬಿಲ್ಲುಗಾರನಾದ ಪಾಲ್ (Paul) ಎಂಬ ಹೆಸರಿನ ಒಬ್ಬ ವ್ಯಕ್ತಿಯ ಬಳಿ ಡಮಸ್ಕಸ್ ನಿವಾಸಿಗಳು ಬಂದು ಸೇರಿದರು. ಆ ವ್ಯಕ್ತಿ ಇದಕ್ಕಿಂತ ಮುಂಚೆ ಯಾವುದೇ ಯುದ್ಧದಲ್ಲಿ ಮುಸ್ಲಿಮರ ಎದುರಾಗಿ ಬಂದಿರಲಿಲ್ಲ. ಡಮಸ್ಕಸಿನ ಜನರು ಅವನನ್ನು ತಮ್ಮ ಸೇನಾಧಿಪತಿಯನ್ನಾಗಿ ಮಾಡಿದರು ಮತ್ತು ಎಲ್ಲ ವಿಧದ ಲಾಲಸೆಯನ್ನು ನೀಡಿ ಅವನನ್ನು ಯುದ್ಧಕ್ಕಾಗಿ ಹುರಿದುಂಬಿಸಿದರು. ನಾವು ಯುದ್ಧ ಮೈದಾನ ಬಿಟ್ಟು ಓಡಿ ಹೋಗಲಾರರು, ಓಡಿ ಹೋಗುವವರನ್ನು ನಿಮ್ಮ ಕೈಯಿಂದಲೇ ಕೊಲ್ಲಲು ನಿಮಗೆ ಅಧಿಕಾರವಿದೆ ಎಂದು ಕೂಡ ಡಮಸ್ಕಸ್ ನಿವಾಸಿಗಳು ಆಣೆಯಿಟ್ಟು ಹೇಳಿದರು. ಈ ಎಲ್ಲ ಪ್ರತಿಜ್ಞೆಗಳು ಮತ್ತು ಒಪ್ಪಂದಗಳು ಪೂರ್ಣವಾದಾಗ ಪಾಲ್ ಮನೆಗೆ ಪ್ರವೇಶಿಸಿ ಯುದ್ಧ ಕವಚವನ್ನು ಧರಿಸುತ್ತಿದ್ದಾಗ ಅವನ ಪತ್ನಿ "ಎಲ್ಲಿಗೆ ಹೋಗುತ್ತಿದ್ದೀರಿ" ಎಂದು ಅವನೊಡನೆ ಕೇಳಿದಳು. ಪಾಲ್ ಹೇಳಿದನು: ಡಮಸ್ಕಸಿನ ಜನರು ನನ್ನನ್ನು ಸೇನಾಧಿಪತಿಯನ್ನಾಗಿ ಮಾಡಿರುವರು. ಈಗ ನಾನು ಅರೇಬಿಯರ ವಿರುದ್ಧ ಯುದ್ಧ ಮಾಡಲು ಹೋಗುತ್ತಿದ್ದೇನೆ.

ಪತ್ನಿ ಹೇಳಿದಳು: ಹಾಗೆ ಮಾಡದಿರಿ, ಮನೆಯಲ್ಲೇ ಇರಿ. ನಿಮಗೆ ಅರೇಬಿಯರ ವಿರುದ್ಧ ಹೋರಾಡಲು ಶಕ್ತಿ ಇಲ್ಲ. ಅವರೊಂದಿಗೆ ಸುಮ್ಮನೆ ಯುದ್ಧ ಮಾಡಬೇಡಿರಿ. ನಾನು ಇಂದು ಒಂದು ಕನಸನ್ನು ಕಂಡಿದ್ದೇನೆ. ಅದೇನೆಂದರೆ, ನಿಮ್ಮ ಕೈಯಲ್ಲಿ ಒಂದು ಬಿಲ್ಲು ಇದೆ. ನೀವು ಪಕ್ಷಿಗಳ ಬೇಟೆ ಮಾಡುತ್ತಿದ್ದೀರಿ. ಕೆಲವು ಹಕ್ಕಿಗಳು ಗಾಯಗೊಂಡು ಕೆಳಗೆ ಬಿದ್ದುವು. ಆದರೆ ಪುನಃ ಎದ್ದು ಹಾರಲು ಶುರು ಮಾಡಿದುವು. ನಾನು ಅಚ್ಚರಿಗೊಂಡೆನು. ಅಚಾನಕ್ಕಾಗಿ ಮೇಲಿಂದ ಅನೇಕ ಹದ್ದುಗಳು ಬಂದುವು. ನಿಮ್ಮ ಮೇಲೆ ಮತ್ತು ನಿಮ್ಮ ಸಂಗಡಿಗರ ಮೇಲೆ ದಾಳಿ ನಡೆಸಿ ನಿಮ್ಮೆಲ್ಲರನ್ನೂ ಅವುಗಳು ನಾಶ ಮಾಡಿದುವು. ಪಾಲ್ ಕೇಳಿದನು: ನೀನು ನನ್ನನ್ನು ಕೂಡ ಕನಸಿನಲ್ಲಿ ಕಂಡೆಯಾ? ಅವಳು ಹೇಳಿದಳು: ಹೌದು, ಹದ್ದು ಬಹಳ ಜೋರಾಗಿ ನಿನ್ನನ್ನು ಕೊಕ್ಕಿನಿಂದ ಚುಚ್ಚುತ್ತದೆ ಮತ್ತು ನೀನು ಪ್ರಜ್ಞೆ ತಪ್ಪಿ ಬಿದ್ದೆ. ಅವಳ ಮಾತುಗಳನ್ನು ಆಲಿಸಿ ಪಾಲ್ ತನ್ನ ಪತ್ನಿಯ ಕೆನ್ನೆಗೆ ಹೊಡೆದನು ಮತ್ತು ಹೀಗೆ ಹೇಳಿದನು: ನಿನ್ನ ಹೃದಯದಲ್ಲಿ ಅರೇಬಿಯರ ಬಗ್ಗೆ ಭಯ ಹುಟ್ಟಿದೆ. ಕನಸಿನಲ್ಲೂ ಅದೇ ಭಯ. ಗಾಬರಿಗೊಳ್ಳಬೇಡ. ನಾನು ಈಗಲೇ ಅವರ ಸರದಾರನನ್ನು ನಿನ್ನ ಸೇವಕ ಮತ್ತು ಸರದಾರರ ಸಂಗಡಿಗರನ್ನು ಆಡುಗಳ ಮತ್ತು ಹಂದಿಗಳ ಕುರುಬರನ್ನಾಗಿ ಮಾಡುವೆನು.

ಅವನು ಅತ್ಯಂತ ವೇಗವಾಗಿ 6 ಸಾವಿರ ಸವಾರರು ಮತ್ತು 10 ಸಾವಿರ ಕಾಲಾಳು ಸೈನಿಕರ ಜೊತೆಗೆ ಮುಸ್ಲಿಮರನ್ನು ಎದುರಿಸಲು ಹೊರಟನು. ಇಸ್ಲಾಮಿನ ಸೈನ್ಯದ ಮಹಿಳೆಯರು, ಮಕ್ಕಳು, ಸಂಪತ್ತುಗಳು ಮತ್ತು ಅಬೂ ಉಬೈದರ ಒಂದು ಸಾವಿರ ಸೈನಿಕರನ್ನು ಅವನು ಹಿಂಬಾಲಿಸಿದನು. ಮುಸ್ಲಿಮರು ಕೂಡ ಯುದ್ಧಕ್ಕಾಗಿ ತಯಾರಾದರು. ನೋಡುತ್ತಲೇ ಸತ್ಯನಿಷೇಧಿಗಳು ಅಲ್ಲಿಗೆ ತಲುಪಿದರು. ಪಾಲ್ ಎಲ್ಲರಿಗಿಂತಲೂ ಮುಂದೆ ಇದ್ದನು. ಅವನು ಒಂದೇ ಸವನೇ ಆರು ಸಾವಿರ ಸಿಪಾಯಿಗಳೊಂದಿಗೆ ಅಬೂ ಉಬೈದ(ರ)ರ ಸೇನೆಯ ಮೇಲೆ ದಾಳಿ ನಡೆಸಿದನು. ಪಾಲಿನ ಸಹೋದರ ಪೀಟರ್ ಕಾಲಾಳು ಸೈನಿಕರೊಂದಿಗೆ ಮಹಿಳೆಯರ ಕಡೆಗೆ ಧಾವಿಸಿದನು. ಕೆಲವು ಮಹಿಳೆಯರನ್ನು ಬಂಧಿಸಿ ಡಮಸ್ಕಸ್ ಕಡೆಗೆ ಮರಳಿ ಹೋದನು. ಒಂದು ಜಾಗಕ್ಕೆ ತಲುಪಿ ತನ್ನ ಸಹೋದರ ಪಾಲನ್ನು ಕಾಯುತ್ತಾ ನಿಂತನು. ಸೈನ್ಯದ ಹಿಂದೆ ಇರುತ್ತೇನೆ ಎಂದು ಹಝ್ರತ್ ಖ಼ಾಲಿದ್(ರ) ಅಭಿಪ್ರಾಯಪಟ್ಟದ್ದು ಸರಿಯೆಂದು ಅಚಾನಕ್ಕಾಗಿ ಬಂದ ವಿಪತ್ತನ್ನು ಕಂಡು ಅಬೂಉಬೈದ(ರ) ಹೇಳಿದರು. ಒಂದೆಡೆ ಮಹಿಳೆಯರು ಮತ್ತು ಮಕ್ಕಳು ಕಿರುಚುತ್ತಿದ್ದರು. ಮತ್ತೊಂದೆಡೆ ಹಝ್ರತ್ ಅಬೂ ಉಬೈದ(ರ)ರ ಮೇಲೆ ಪಾಲ್ ಪದೇ ಪದೇ ಹಲ್ಲೆ ನಡೆಸುತ್ತಿದ್ದನು. ಅವರು ಕೂಡ ಶಕ್ತವಾಗಿ ಅದನ್ನು ಎದುರಿಸಿದರು.

ಹಝ್ರತ್ ಸಹಲ್(ರ) ವೇಗದ ಕುದುರೆಯಲ್ಲಿ ಸವಾರರಾಗಿ ಹಝ್ರತ್ ಖ಼ಾಲಿದ್(ರ)ರ ಬಳಿಗೆ ಹೋಗಿ ಎಲ್ಲ ಸಂಗತಿಗಳನ್ನು ತಿಳಿಸಿದರು. ಇನ್ನಾ ಲಿಲ್ಲಾಹ್ ಎಂದು ಹಝ್ರತ್ ಖ಼ಾಲಿದ್(ರ) ಉದ್ಗರಿಸಿದರು. ಮಹಿಳೆಯರು ಮತ್ತು ಮಕ್ಕಳ ಸುರಕ್ಷೆಗಾಗಿ ಹಝ್ರತ್ ರಾಫೀ ಮತ್ತು ಅಬ್ದುರ್ರಹ್ಮಾನ್ ಬಿನ್ ಔಫ್‌ರಿಗೆ ಒಂದೊಂದು ಸಾವಿರ ಸೈನಿಕರನ್ನು ನೀಡಿ ಹಝ್ರತ್ ಖ಼ಾಲಿದ್(ರ) ಕಳುಹಿಸಿದರು. ಅನಂತರ ಹಝ್ರತ್ ಝ಼ಿರಾರ್(ರ)ರಿಗೆ ಒಂದು ಸಾವಿರ ಸವಾರರೊಂದಿಗೆ ಕಳುಹಿಸಿದರು ಮತ್ತು ಸ್ವತಃ ಸೈನಿಕರೊಂದಿಗೆ ಶತ್ರುಗಳ ಕಡೆಗೆ ಹೋದರು. ಮತ್ತೊಂದೆಡೆ ಹಝ್ರತ್ ಅಬೂ ಉಬೈದ(ರ) ಯುದ್ಧದಲ್ಲಿ ನಿರತರಾಗಿದ್ದಾಗ, ವಿವಿಧ ಪ್ರದೇಶಗಳಿಂದ ಬಂದ ಮುಸ್ಲಿಮರ ಸೈನ್ಯಗಳು ಎಂತಹ ದಾಳಿ ನಡೆಸಿತು ಎಂದರೆ, ಡಮಸ್ಕಸಿನಿಂದ ಬಂದು ದಾಳಿ ನಡೆಸುತ್ತಿದ್ದ ರೋಮನರಿಗೆ ತಮಗೆ ಖಂಡಿತ ಪರಾಜಯ ಮತ್ತು ಅಪಮಾನ ಉಂಟಾಗುವುದು ಎಂದು ಖಚಿತವಾಯಿತು. ಹಝ್ರತ್ ಝ಼ಿರಾರ್(ರ) ಬೆಂಕಿಯ ಜ್ವಾಲೆಯ ಹಾಗೆ ಪಾಲಿನ ಕಡೆಗೆ ಧಾವಿಸಿದರು. ಬಂದದ್ದು ಹಝ್ರತ್ ಝ಼ಿರಾರ್(ರ) ಆಗಿರುವರು ಎಂದು ಅವನಿಗೆ ಗೊತ್ತಾದಾಗ ಅವನು ನಡುಗಿದನು ಮತ್ತು ಓಡಿ ಹೋದನು. ಹಝ್ರತ್ ಝ಼ಿರಾರ್(ರ) ಅವನನ್ನು ಹಿಂಬಾಲಿಸಿದರು ಮತ್ತು ಜೀವಂತವಾಗಿಯೇ ಹಿಡಿದು ಬಂಧಿಸಿದರು. ಈ ಯುದ್ಧದಲ್ಲಿ ಸತ್ಯನಿಷೇಧಿಗಳ ಆರು ಸಾವಿರ ಜನರಲ್ಲಿ ಹೆಚ್ಚೆಂದರೆ ನೂರು ವ್ಯಕ್ತಿಗಳು ಜೀವಂತವಾಗಿ ಬಚಾವಾಗಿರಬಹುದು. ಹಝ್ರತ್ ಖ಼ೌಲ(ರ)ರನ್ನು ವಿರೋಧಿಗಳು ಬಂಧಿಸಿದ ಕಾರಣದಿಂದ ಹಝ್ರತ್ ಝ಼ಿರಾರ್(ರ) ಚಿಂತಿತರಾಗಿದ್ದರು. ಆಗ ಹಝ್ರತ್ ಖ಼ಾಲಿದ್(ರ) ಹೇಳಿದರು: ಗಾಬರಿಗೊಳ್ಳಬೇಡಿರಿ. ನಾವು ಶತ್ರುಗಳ ಎಂತಹ ವ್ಯಕ್ತಿಗಳನ್ನು ಹಿಡಿದಿದ್ದೇವೆ ಎಂದರೆ, ಅದರ ಬದಲಾಗಿ ಅವರು ನಮ್ಮ ಬಂಧಿಗಳನ್ನು ಸುಲಭವಾಗಿ ಬಿಡುಗಡೆಗೊಳಿಸುವರು.

ಹಝ್ರತ್ ಖ಼ಾಲಿದ್(ರ) 2 ಸಾವಿರ ಸೈನಿಕರ ಜೊತೆಗೆ ಬಂಧಿತರಾದ ಮಹಿಳೆಯರನ್ನು ಹುಡುಕಲು ಸ್ವತಃ ಹೋದರು. ಇತರ ಮಹಿಳೆಯರ ಸುರಕ್ಷೆಗಾಗಿ ಉಳಿದ ಎಲ್ಲ ಸೈನಿಕರನ್ನು ಹಝ್ರತ್ ಉಬೈದ(ರ)ರಿಗೆ ಒಪ್ಪಿಸಿದರು. ಹಝ್ರತ್ ಖ಼ಾಲಿದ್(ರ) ಬೇಗನೇ ಮಹಿಳೆಯರನ್ನು ಬಂಧಿಸಿದ ಜಾಗಕ್ಕೆ ತಲುಪಿದಾಗ, ಅಲ್ಲಿ ಧೂಳು ಏಳುತ್ತಿರುವುದಾಗಿ ಕಂಡುಬಂತು. ಅಲ್ಲಿ ಯುದ್ಧವೇಕೆ ನಡೆಯುತ್ತಿದೆ ಎಂದು ಹಝ್ರತ್ ಖ಼ಾಲಿದ್(ರ) ಅಚ್ಚರಿಗೊಂಡರು. ಪತ್ತೆ ಹಚ್ಚಿದಾಗ ತಿಳಿದು ಬಂದದ್ದು ಏನೆಂದರೆ, ಪೀಟರ್ ಮಹಿಳೆಯರನ್ನು ಬಂಧಿಸಿ ನದಿಯ ಬಳಿ ತನ್ನ ಸಹೋದರ ಪಾಲನ್ನು ಕಾಯುತ್ತಾ ನಿಂತಿದ್ದನು. ಅವರು ಮಹಿಳೆಯರನ್ನು ಪರಸ್ಪರ ವಿತರಿಸುತ್ತಿದ್ದರು. ಆ ಮಹಿಳೆಯರಲ್ಲಿ ಅನೇಕರು ಶೂರ, ಅನುಭವಿ ಕುದುರೆ ಸವಾರರು ಒಳಗೊಂಡಿದ್ದರು ಮತ್ತು ಅವರು ಎಲ್ಲ ರೀತಿಯ ಯುದ್ಧಗಳನ್ನು ಮಾಡಲು ನಿಪುಣರಾಗಿದ್ದರು. ಅವರೆಲ್ಲರೂ ಒಟ್ಟು ಸೇರಿದರು ಮತ್ತು ಹಝ್ರತ್ ಖ಼ೌಲ(ರ) ಅವರನ್ನು ಸಂಬೋಧಿಸುತ್ತಾ ಹೇಳಿದರು: "ಓ ಹಿಮಿರ್ ಬುಡಕಟ್ಟಿನ ಹೆಣ್ಣುಮಕ್ಕಳೇ! ಮತ್ತು ತುಬ್ಬಾ ಬುಡಕಟ್ಟಿನ ನೆನಪುಗಳೇ! ರೋಮನ್ ನಾಸ್ತಿಕರು ನಿಮ್ಮನ್ನು ಉಪಪತ್ನಿಯರನ್ನಾಗಿ ಮಾಡುತ್ತಾರೆ ಎಂದು ನೀವು ತೃಪ್ತರಾಗಿದ್ದೀರಾ? ನಿಮ್ಮ ಧೈರ್ಯ ಎಲ್ಲಿಗೆ ಹೋಯಿತು ಮತ್ತು ಅರಬ್‌ನ ಸಭೆಗಳಲ್ಲಿ ಉಲ್ಲೇಖಿಸಲಾದ ನಿಮ್ಮ ಗೌರವಕ್ಕೆ ಏನಾಯಿತು? ಕ್ಷಮಿಸಿ! ನೀವು ಗೌರವದಿಂದ ಬೇರ್ಪಟ್ಟಿದ್ದೀರಿ ಮತ್ತು ಧೈರ್ಯ ಮತ್ತು ನಮ್ರತೆಯಿಂದ ದೂರವಿರುವುದನ್ನು ನಾನು ಕಂಡುಕೊಂಡಿದ್ದೇನೆ. ಈ ಬರಲಿರುವ ವಿಪತ್ತಿಗಿಂತ ನಿಮ್ಮ ಸಾವು ಮೇಲು ಎಂದು ಅವರೊಳಗೆ ಅಭಿಮಾನ ಮತ್ತು ಆವೇಶ ಉಂಟುಮಾಡಿದರು ಹಾಗೂ ಅವರ ಧೈರ್ಯವನ್ನು ವರ್ಧಿಸಿದರು.

ಇದನ್ನು ಕೇಳಿದ ಸಹಾಬಿಯೊಬ್ಬರು, ಓ ಖೌಲಾ!! ನೀವು ವಿವರಿಸಿದ್ದು ನಿಜ, ಆದರೆ ಹೇಳಿ ನಾವು ಸೆರೆಯಲ್ಲಿದ್ದೇವೆ. ನಮ್ಮ ಕೈಯಲ್ಲಿ ಕತ್ತಿ, ಬರ್ಛಿಗಳಿಲ್ಲ. ನಾವು ಏನು ಮಾಡಬಹುದು! ಕುದುರೆಯೂ ಇಲ್ಲ, ತೋಳುಗಳೂ ಇಲ್ಲ, ಏಕೆಂದರೆ ಇದ್ದಕ್ಕಿದ್ದಂತೆ ನಾವು ಸೆರೆಯಾಳುಗಳನ್ನಾಗಿ ಮಾಡಲಾಯಿತು. ಹಝ್‌ರತ್ ಖೌಲಾ(ರ) ಹೇಳಿದರು: ಜಾಗೃತರಾಗಿರಿ, ಡೇರೆಗಳ ಕೋಲುಗಳು (ಗೂಟಗಳು) ಇವೆ, ನಾವು ಅವುಗಳನ್ನು ಎತ್ತಿ ಈ ದುರದೃಷ್ಟಕರ ಮೇಲೆ ದಾಳಿ ಮಾಡಬೇಕು. ಮುಂದೆ ಅಲ್ಲಾಹನು ನಮಗೆ ಸಹಾಯ ನೀಡುತ್ತಾನೆ. ಒಂದೋ ನಾವು ಮೇಲುಗೈ ಸಾಧಿಸುತ್ತೇವೆ ಅಥವಾ ಹುತಾತ್ಮರಾಗುತ್ತೇವೆ. ತದನಂತರ, ಪ್ರತಿಯೊಬ್ಬ ಮಹಿಳೆಯು ಡೇರೆಯ ಕೋಲುಗಳನ್ನು ಎತ್ತಿಕೊಂಡರು. ಹಝ್‌ರತ್ ಖೌಲಾ(ರ) ಕೋಲುಗಳನ್ನು ತಮ್ಮ ಹೆಗಲ ಮೇಲೆ ಹಾಕಿಕೊಂಡು ಮುಂದೆ ಬಂದರು.

ಹಝ್‌ರತ್ ಖೌಲಾ(ರ) ಅವರು ತಮ್ಮ ಅಧೀನದಲ್ಲಿರುವ ಮಹಿಳೆಯರಿಗೆ ಸರಪಳಿಯ ಕೊಂಡಿಗಳಂತೆ ಒಂದಾಗಬೇಕು ಎಂದು ಹೇಳಿದರು. ಬೇರೆ ಬೇರೆಯಾಗಬೇಡಿ, ಇಲ್ಲದಿದ್ದರೆ ನೀವೆಲ್ಲರೂ ಕೊಲ್ಲಲ್ಪಡುತ್ತೀರಿ. ಅದರ ನಂತರ, ಹಝ್‌ರತ್ ಖೌಲಾ ಮುಂದೆ ಹೋಗಿ ರೋಮನ್ ಅವಿಶ್ವಾಸಿಯನ್ನು ಕೊಂದರು. ಈ ಮಹಿಳೆಯರ ಧೈರ್ಯ ಮತ್ತು ಶೌರ್ಯವನ್ನು ನೋಡಿ ರೋಮನ್ನರು ಆಶ್ಚರ್ಯಚಕಿತರಾದರು. ಪೀಟರ್ ಹೇಳಿದನು, "ದರಿದ್ರರೇ!" ಇವರು ಏನು ಮಾಡುತ್ತಿದ್ದಾರೆ? ಇಂದು ನಾವು ಈ ಮರದ ತುಂಡುಗಳಿಂದ ನಿಮ್ಮ ಬುದ್ಧಿಯನ್ನು ಸರಿಪಡಿಸಲು ಮತ್ತು ನಿಮ್ಮನ್ನು ಕೊಲ್ಲುವ ಮೂಲಕ ನಮ್ಮ ಪೂರ್ವಜರ ಗೌರವವನ್ನು ಕಾಪಾಡಲು ನಿರ್ಧರಿಸಿದ್ದೇವೆ ಎಂದು ಓರ್ವ ಸಹಾಬಿ ಉತ್ತರಿಸಿದರು. ಪೀಟರ್ ಅವರನ್ನು ಜೀವಂತವಾಗಿ ಸೆರೆಹಿಡಿಯಲು ಮತ್ತು

ಖೌಲಾರನ್ನು ಜೀವಂತವಾಗಿ ಸೆರೆಹಿಡಿಯಲು ವಿಶೇಳ ಕಾಳಜಿ ವಹಿಸಲು ಹೇಳಿದನು. ಮೂರು ಸಾವಿರ ರೋಮನ್ನರು ಎಲ್ಲಾ ಕಡೆಗಳಲ್ಲಿ ಒಂದು ವೃತ್ತದಲ್ಲಿ ನಿಂತಿದ್ದರು, ಆದರೆ ಯಾರೂ ಮಹಿಳೆಯರನ್ನು ಸಮೀಪಿಸಲು ಸಾಧ್ಯವಾಗಲಿಲ್ಲ. ಅವರಲ್ಲಿ ಯಾರಾದರು ಮುಂದೆ ಹೋದರೆ, ಈ ಮಹಿಳೆಯರು ಅವನ ಕುದುರೆಗಳನ್ನು ಮತ್ತು ನಂತರ ಅವನನ್ನು ಕೊಲ್ಲುತ್ತಿದ್ದರು. ಈ ರೀತಿಯಾಗಿ ಮೂವತ್ತು ಸವಾರರು ಈ ಮಹಿಳೆಯರಿಂದ ಕೊಲ್ಲಲ್ಪಟ್ಟರು.

ಇದನ್ನು ನೋಡಿದ ಪೀಟರ್ ಬೆಂಕಿಗಾಹುತಿಯಾದನು. ಕುದುರೆಯಿಂದ ಇಳಿದನು. ತನ್ನ ಸಹಚರರೊಂದಿಗೆ ಕತ್ತಿಗಳಿಂದ ಹಲ್ಲೆ ನಡೆಸಲು ಪ್ರಾರಂಭಿಸಿದನು, ಆದರೆ ಈ ಮಹಿಳೆಯರು ಒಂದೇ ಸ್ಥಳದಲ್ಲಿ ಜಮಾಯಿಸಿ ಎಲ್ಲರನ್ನು ವಿರೋಧಿಸಿದರು ಮತ್ತು ಯಾರೂ ಹತ್ತಿರ ಬರಲು ಸಾಧ್ಯವಾಗಲಿಲ್ಲ. ಹಝ್ರತ್ ಖೌಲಾ(ರ) ಅವರನ್ನು ಉದ್ದೇಶಿಸಿ ಪೀಟರ್ ಹೇಳಿದನು: ಓ ಖೌಲಾ! ನಿಮ್ಮ ಜೀವದ ಮೇಲೆ ಕರುಣೆ ತೋರಿಸು. ನಾನು ನಿನ್ನನ್ನು ಮೆಚ್ಚುತ್ತೇನೆ. ನಿನಗಾಗಿಯೂ ನನ್ನ ಮನಸ್ಸಿನಲ್ಲಿ ಬಹಳಷ್ಟು ಇದೆ. ನಾನು ರಾಜನಂತೆ ನಿನ್ನ ಒಡೆಯನಾಗಬೇಕು ಮತ್ತು ನನ್ನ ಆಸ್ತಿಯೆಲ್ಲ ನಿನ್ನ ಆಸ್ತಿಯಾಗಬೇಕು ಎಂದು ಏಕೆ ಬಯಸುವುದಿಲ್ಲ? ಹಝ್ರತ್ ಖೌಲಾ ಹೇಳಿದರು, "ಓ ದುರದೃಷ್ಟಕರ ಅವಿಶ್ವಾಸಿಯೇ! ಅಲ್ಲಾಹನ ಆಣೆ! ನನಗೆ ಸಾಧ್ಯವಾದರೆ, ಈಗಲೇ ಈ ಮರದ ಕೋಲಿನಿಂದ ನಿನ್ನ ತಲೆಯನ್ನು ಒಡೆಯುತ್ತೇನೆ. ದೇವರಾಣೆ! ನೀನು ನನ್ನ ಸಮಾನತೆಯನ್ನು ಹೇಳಿಕೊಂಡರೂ ನನ್ನ ಆಡು ಒಂಟೆಗಳನ್ನು ಮೇಯಿಸುವುದು ನನಗೆ ಇಷ್ಟವಿಲ್ಲ. ಪೀಟರ್ ನಂತರ ಅವರೆಲ್ಲರನ್ನು ಕೊಲ್ಲಲು ಸೈನ್ಯಕ್ಕೆ ಆದೇಶಿಸಿದನು. ಹಝ್ರತ್ ಖಾಲಿದ್ ನೇತೃತ್ವದಲ್ಲಿ ಮುಸ್ಲಿಮರು ಅಲ್ಲಿಗೆ ಆಗಮಿಸಿದಾಗ ಸೇನೆಯು ಹೊಸದಾಗಿ ತಯಾರಾಗುತ್ತಿತ್ತು ಮತ್ತು ಆರಂಭಿಕ ದಾಳಿಯನ್ನು ಮಾಡಲಿತ್ತು. ಅವರಿಗೆ ಎಲ್ಲಾ ಸಂದರ್ಭಗಳು ಮತ್ತು ಘಟನೆಗಳ ಬಗ್ಗೆ ತಿಳಿದುಕೊಂಡರು. ಮಹಿಳೆಯರ ಶೌರ್ಯ ಮತ್ತು ಧೈರ್ಯದಿಂದ ಹೋರಾಡಿದ ಬಗ್ಗೆ ತಿಳಿದು ಮುಸ್ಲಿಮರು ಸಂತೋಷಪಟ್ಟರು, ಮತ್ತು ನಂತರ ಇಡೀ ಸೈನ್ಯವು ಅವಿಶ್ವಾಸಿಗರನ್ನು ಸುತ್ತುವರೆದು ಒಟ್ಟಿಗೆ ದಾಳಿ ಮಾಡಿದರು. ಅಲ್ಲಾಹನ ಸಹಾಯ ಬಂದಿದೆ ಎಂದು ಹಝ್ರತ್ ಖೌಲಾ ಕೂಗಿದರು! ಅಲ್ಲಾಹನು ದಯೆ ತೋರಿದ್ದಾನೆ! ಪೀಟರ್ ಮುಸ್ಲಿಮರನ್ನು ಕಂಡಾಗ ಆತಂಕಗೊಂಡು ಓಡಿಹೋಗಲು ಪ್ರಾರಂಭಿಸಿದನು, ಆದರೆ ಅವನು ಓಡಿಹೋಗುವ ಮೊದಲು, ಇಬ್ಬರು ಮುಸ್ಲಿಂ ಕುದುರೆ ಸವಾರರು ತನ್ನ ಕಡೆಗೆ ಬರುತ್ತಿರುವುದನ್ನು ಅವನು ನೋಡಿದನು. ಅವರಲ್ಲಿ ಒಬ್ಬರು ಖಾಲಿದ್ ಮತ್ತು ಇನ್ನೊಬ್ಬರು ಹಝ್ರತ್ ಝಿರಾರ್ ಆಗಿದ್ದರು. ಝಿರರ್ ಅವನನ್ನು ಈಟಿಯಿಂದ ಹೊಡೆದರು. ಅವನು ಕುದುರೆಯಿಂದ ಬಿದ್ದನು. ನಂತರ ಝಿರಾರ್ ಎರಡನೇ ಹೊಡೆತವನ್ನು ಹೊಡೆದು ಅವನ್ನು ನಧಿಸಿದರು. ಮುಸ್ಲಿಮರು ಅನೇಕ ರೋಮನ್ನರನ್ನು ಕೊಂದರು. ಬದುಕುಳಿದವರು ಡಮಾಸ್ಕಸ್‌ಗೆ ಓಡಿಹೋದರು.

ಹಝ್ರತ್ ಖಾಲಿದ್(ರ) ಹಿಂತಿರುಗಿದಾಗ, ಅವರು ಬೋಲಸ್ ಅವನನ್ನು ಕರೆದು ಅವನಿಗೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿಕೊ, ಇಲ್ಲದಿದ್ದರೆ ನಿನ್ನನ್ನು ನಿನ್ನ ಸಹೋದರನಂತೆಯೇ ನಡೆಸಿಕೊಳ್ಳುತ್ತೇವೆ ಎಂದು ಹೇಳಿದರು. ಬೋಲಸ್ ಹೇಳಿದನು, "ನನ್ನ ಸಹೋದರನಿಗೆ ಏನಾಯಿತು? ಖಾಲಿದ್ ಹೇಳಿದರು: ಅವನನ್ನು ಕೊಲ್ಲಲಾಗಿದೆ. ತನ್ನ ಸಹೋದರನ ಭವಿಷ್ಯವನ್ನು ಕಂಡು, ಬೋಲಸ್ ಜೀವನವು ಇನ್ನು ಮುಂದೆ ವಿನೋದವಲ್ಲ ನನ್ನನ್ನು ಸಹ ನನ್ನ ಸಹೋದರನೊಂದಿಗೆ ಸೇರಿಸಿ ಎಂದು ಹೇಳಿದನು. ಆದ್ದರಿಂದ ಅವನನ್ನೂ ಸಹ ಕೊಲ್ಲಲಾಯಿತು. (ಫುತೂಹಾತೆ ಶಾಮ್, ಫಝುಲ್ ಮುಹಮ್ಮದ್ ಯೂಸುಫ್ ಝಈ, ಪುಟ-82-89, ಮಕ್ತಬ ಈಮಾನ್ ವ ಯಖೀನ್)

ಆದಾಗ್ಯೂ, ಇಸ್ಲಾಮಿಕ್ ಸೈನ್ಯವು ಮತ್ತೆ ಅಜ್ನಾದಿನ್ ಸ್ಥಳದಲ್ಲಿ ಜಮಾಯಿಸಿತು. ಈ ವಿವರವನ್ನು ಮೊದಲು ವಿವರಿಸಲಾಗಿದೆ ಇದು ಡಮಾಸ್ಕಸ್ನ ಎರಡನೇ ಮುತ್ತಿಗೆಯಾಗಿದೆ. ಅವರು ಮೊದಲು ಬಿಟ್ಟು ಹೊರಟುಬಂದಿದ್ದರು. ಈಗ ಈ ಯುದ್ಧದ ನಂತರ ಮತ್ತೊಮ್ಮೆ ಡಮಸ್ಕಸ್ ಅನ್ನು ಮುತ್ತಿಗೆಯ ಬಗ್ಗೆ ಹೀಗೆ ಬರೆಯಲಾಗಿದೆ: ಅಜ್ನಾದೈನಿನ ವಿಜಯದ ನಂತರ ಡಮಸ್ಕಸಿನ ಕಡೆಗೆ ಮರಳಿ ಹೋಗಲು ಹಝ್ರತ್ ಖಾಲಿದ್(ರ) ಇಸ್ಲಾಮಿನ ಸೈನ್ಯಕ್ಕೆ ಆದೇಶ ನೀಡಿದರು. ಅಜ್ನಾದೈನಿನಲ್ಲಿ ರೋಮನರ ಸೈನ್ಯದ ಪರಾಜಯದ ಸುದ್ದಿ ಡಮಸ್ಕಸ್ ನಿವಾಸಿಗಳಿಗೆ ಮೊದಲೇ ಲಭಿಸಿತ್ತು. ಆದರೆ ಇಸ್ಲಾಮಿನ ಸೈನ್ಯವು ಡಮಸ್ಕಸ್ ಬರುತ್ತಿರುವುದಾಗಿ ಗೊತ್ತಾದಾಗ ಅವರು ಬಹಳ ಗಾಬರಿಗೊಂಡರು. ಡಮಸ್ಕಸಿನ ಸುತ್ತಮುತ್ತ ನೆಲೆಸಿದ್ದವರು ಓಡಿಹೋಗಿ ಕೋಟೆಯೊಳಗೆ ಅಭಯ ಪಡೆದರು. ಸಾಕಷ್ಟು ಪ್ರಮಾಣದಲ್ಲಿ ದವಸಧಾನ್ಯಗಳು ಮತ್ತು ಖರ್ಚಿಗೆ ಬೇಕಾದ ಸಾಮಾನುಗಳನ್ನು ಅವರು ಒಟ್ಟುಗೂಡಿಸಿದರು. ಇದಲ್ಲದೆ, ಶಸ್ತ್ರಾಸ್ತ್ರಗಳು ಮತ್ತು ಯುದ್ಧ ಸಲಕರಣೆಗಳನ್ನು ಸಹ ಸಂಗ್ರಹಿಸಲಾಗಿದೆ. ಕೋಟೆಯ ಗೋಡೆಗಳಿಂದ ಮುತ್ತಿಗೆ ಹಾಕುವವರ ಮೇಲೆ ದಾಳಿ ಮಾಡಲು ಅವರು ಕವಣೆಯಂತ್ರಗಳು, ಕಲ್ಲುಗಳು, ಗುರಾಣಿಗಳು, ಬಾಣಗಳು, ಬಿಲ್ಲುಗಳು ಇತ್ಯಾದಿಗಳನ್ನು ಕೋಟೆಯ ಗೋಡೆಗಳಿಗೆ ತಲುಪಿಸಿದರು. ಇಸ್ಲಾಮಿಕ್ ಸೇನೆಯು ಡಮಾಸ್ಕಸ್ ಬಳಿ ಬೀಡುಬಿಟ್ಟಿತ್ತು. ನಂತರ ಇಸ್ಲಾಮಿಕ್ ಸೈನ್ಯವು ಮುಂದುವರೆದು ಕೋಟೆಯನ್ನು ಮುತ್ತಿಗೆ ಹಾಕಿತು. ಹಝ್ರತ್ ಖಾಲಿದ್(ರ) ಅವರು ಡಮಾಸ್ಕಸ್‌ನ ಎಲ್ಲಾ ದ್ವಾರಗಳಲ್ಲಿ ತಮ್ಮ ಸೈನ್ಯದೊಂದಿಗೆ ನಾಯಕರನ್ನು ನೇಮಿಸಿದರು. (ಮರ್ದಾನೆ ಅರಬ್, ಭಾಗ-1, ಅಬ್ದುಲ್ ಸತ್ತಾರ್ ಹಮ್ದಾನಿ ಅವರಿಂದ, ಪುಟ-247, ಅಕ್ಬರ್ ಬುಕ್‌ಸೆಲ್ಲರ್, ಲಾಹೋರ್)

ಆ ಸಮಯದಲ್ಲಿ ಡಮಾಸ್ಕಸ್ನ ದೊರೆ ತೋಮಸ್ ಆಗಿದ್ದನು. ಡಮಸ್ಕಸಿನ ಸರದಾರರು ಮತ್ತು ಚಿಂತಕರು ತಮ್ಮ ಅಧಿಕಾರಿಯಾದ ತೋಮಸ್‌ನೊಡನೆ ಹಿರ್ಕಲಿನಿಂದ ಸಹಾಯ ಬೇಡಲು ಅಥವಾ ಮುಸ್ಲಿಮರೊಡನೆ ಸಂಧಾನ ಮಾಡಿಕೊಳ್ಳುವಂತೆ ಸಲಹೆ ನೀಡಿದರು. ಅವರು ಕೇಳುವದನ್ನು ನೀಡುವ ಮೂಲಕ ನಿಮ್ಮ ಜೀವವನ್ನು ಉಳಿಸಿಕೊಳ್ಳಿ. ಈ ಬಗ್ಗೆ ತೋಮಸ್ ಅಹಂಕಾರ ಮತ್ತು ಹೆಮ್ಮೆಯಿಂದ ಅರಬ್ಬರ ಸ್ಥಿತಿ ನನಗೆ ಅರ್ಥವಾಗುತ್ತಿಲ್ಲ. ನಾನು ಹರ್ಕಲ್‌ನ ಅಳಿಯ ಮತ್ತು ಯುದ್ಧದಲ್ಲಿ ಪರಿಣಿತನಾಗಿದ್ದೇನೆ. ನಾನಿಲ್ಲದೇ ಮುಸಲ್ಮಾನರಿಗೆ ಊರಿಗೆ ಕಾಲಿಡುವ ಧೈರ್ಯ ಬರುವುದಿಲ್ಲ ಎಂದು ಹೇಳಿದನು.

ಮುಖ್ಯಸ್ಥರ ಮನವೊಲಿಕೆಗೆ ತೋಮಸ್ ಶೀಘ್ರದಲ್ಲೇ ಹರ್ಕಲ್‌ನಿಂದ ನಮ್ಮ ಸಹಾಯಕ್ಕೆ ಒಂದು ಸೈನ್ಯ ಬರಲಿದೆ ಎಂದು ಹೇಳಿ ಅವರನ್ನು ಸಮಾಧಾನಪಡಿಸಿದನು. ತೋಮಸ್ ಎಲ್ಲಾ ಕಡೆಯಿಂದ ಮುಸ್ಲಿಮರ ಮೇಲೆ ಉಗ್ರ ದಾಳಿಗೆ ಆದೇಶಿಸಿದನು. ಈ ದಾಳಿಗಳಲ್ಲಿ ಅನೇಕ ಮುಸ್ಲಿಮರು ಗಾಯಗೊಂಡರು ಮತ್ತು ಹುತಾತ್ಮರಾದರು. ಹಝ್ರತ್ ಅಬಾನ್ ಬಿನ್ ಸಈದ್(ರ) ಅವರಿಗೆ ಕೂಡ ಒಂದು ವಿಷಪೂರಿತ ಬಾಣವು ಬಂದು ತಗಲಿತು. ಬಾಣವನ್ನು ತೆಗೆದ ನಂತರ ಗಾಯದ ಮೇಲೆ ಪೇಟವನ್ನು ಕಟ್ಟಿಕೊಂಡರು, ಆದರೆ ಸ್ವಲ್ಪ ಸಮಯದ ನಂತರ ಅವರ ದೇಹದಲ್ಲಿ ವಿಷವು ಹುದುಗಿತು ಮತ್ತು ಅವರು ಮೂರ್ಛೆಯಾಗಿ ಕೆಳಗೆ ಬಿದ್ದು ಸ್ವಲ್ಪ ಸಮಯದ ನಂತರ ಅಲ್ಲೇ ಮರಣ ಹೊಂದಿದರು. ಹಝ್ರತ್ ಅಬಾನ್ ಅಜ್ನಾದಿನ್ ಯುದ್ಧದ ಸಮಯದಲ್ಲಿ ಹಝ್ರತ್ ಉಮ್ಮ ಅಬಾನ್ ಅವರನ್ನು ವಿವಾಹವಾದರು ಮತ್ತು ಅವರ ಕೈಯಲ್ಲಿ ಮದರಂಗಿಯ ಬಣ್ಣ ಮತ್ತು ಸುಗಂಧ ದ್ರವ್ಯದ ವಾಸನೆಯು ಅವರ ತಲೆಯ ಮೇಲೆ ಉಳಿಯಿತು, ಅಂದರೆ ಅದು ತಾಜಾ ಮದುವೆಯಾಗಿತ್ತು. ಜಿಹಾದ್‌ನ ಮುಂಚೂಣಿಯಲ್ಲಿದ್ದ ಅರೇಬಿಯಾದ ಕೆಚ್ಚೆದೆಯ ಮಹಿಳೆಯರಲ್ಲಿ ಹಝ್ರತ್ ಉಮ್ಮ್ ಅಬಾನ್ ಅವರನ್ನು ಪರಿಗಣಿಸಲಾಗುತ್ತದೆ. ಪತಿಯ ಹುತಾತ್ಮತೆಯ ಸುದ್ದಿ ತಿಳಿದ ನಂತರ ಅವರು ಓಡಿ, ಎಡವಿ ಬಂದು ಪತಿಯ ಪಾರ್ಥಿವ ಶರೀರದ ಪಕ್ಕದಲ್ಲಿ ತಾಳ್ಮೆ ಮತ್ತು ಧೈರ್ಯದ ಮೂರ್ತಿಯಾಗಿ ನಿಂತರು. ತಮ್ಮ ನಾಲಿಗೆಯಿಂದ ಅಕೃತಘ್ನತೆಯ ಒಂದು ಮಾತನ್ನೂ ಹೇಳದೆ ಪತಿಗೆ ವಿದಾಯ ಹೇಳುತ್ತಾ ಒಂದಷ್ಟು ಕವಿತೆಗಳನ್ನು ಹೇಳಿದರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರ ನಮಾಝೆ ಜನಾಝುವನ್ನು ನಿರ್ವಹಿಸಿದರು. ಸಮಾಧಿಯ ನಂತರ, ಹಝ್ರತ್ ಉಮ್ಮ್ ಅಬಾನ್(ರ) ಬಲವಾದ ನಿರ್ಣಯ ಮತ್ತು ದೃಢ ಉದ್ದೇಶದಿಂದ ತನ್ನ ಡೇರೆಗೆ ಹೋದರು. ಆಯುಧಗಳನ್ನು ಹಿಡಿದುಕೊಂಡು ಮುಖದ ಮೇಲೆ ಬಟ್ಟೆಯನ್ನು ಕಟ್ಟಿಕೊಂಡು ಪತಿ ಹುತಾತ್ಮರಾದ ತೋಮಸ್‌ನ ಬಳಿ ತಲುಪಿದರು. ಆ ಸಮಯದಲ್ಲಿ ಭೀಕರ ಯುದ್ಧ ನಡೆಯುತ್ತಿತ್ತು. ಹಝ್ರತ್ ಉಮ್ಮ್ ಅಬಾನ್(ರ) ಈ ಮುಸ್ಲಿಮರೊಂದಿಗೆ ಸೇರಿಕೊಂಡು ಉಗ್ರ ಹೋರಾಟವನ್ನು ಮುಂದುವರೆಸಿದರು ಮತ್ತು ತನ್ನ ಬಾಣಗಳಿಂದ ಅನೇಕ ರೋಮನ್ನರನ್ನು ಗಾಯಗೊಳಿಸಿ ಅವರನ್ನು ಕೊಂದರು ಮತ್ತು ಅಂತಿಮವಾಗಿ ಹೋರಾಟದ ಸಮಯದಲ್ಲಿ ಅವಕಾಶವನ್ನು ಪಡೆದು ಶಿಲುಬೆಯನ್ನು ಹಿಡಿದಿದ್ದ ತೋಮಾದ ರಕ್ಷಕನ ಮೇಲೆ ಗುರಿಯನ್ನು ಪಡೆದರು.

ಈ ಶಿಲುಬೆಯನ್ನು ಚಿನ್ನದಿಂದ ಮಾಡಲಾಗಿತ್ತು ಮತ್ತು ಅಮೂಲ್ಯವಾದ ಕಲ್ಲುಗಳಿಂದ ಹೊದಿಸಲಾಗಿತ್ತು. ಶಿಲುಬೆಯನ್ನು ಹೊತ್ತವನು ರೋಮನ್ನರನ್ನು ಯುದ್ಧಮಾಡಲು ಪ್ರೋತ್ಸಾಹಿಸುತ್ತಿದ್ದನು ಮತ್ತು ಶಿಲುಬೆಯ ಮೂಲಕ ವಿಜಯ ಮತ್ತು ಯಶಸ್ಸನ್ನು ಪ್ರಾರ್ಥಿಸುತ್ತಿದ್ದನು. ಹಝ್ರತ್ ಉಮ್ಮ್ ಅಬಾನ್(ರ)ನ ಬಾಣ ಆ ವ್ಯಕ್ತಿಗೆ ತಾಗುತ್ತಿದ್ದಂತೆಯೇ ಆತನ ಕೈಯಿಂದ ಶಿಲುಬೆ ಬಿದ್ದು ಮುಸಲ್ಮಾನರ ಕೈ ಸೇರಿತು.

ಆ ಶಿಲುಬೆ ಮುಸಲ್ಮಾನರ ವಶದಲ್ಲಿ ಇರುವುದನ್ನು ಕಂಡ ತೋಮಸ್ ಅದನ್ನು ಹಿಂದಕ್ಕೆ ತೆಗೆದುಕೊಳ್ಳಲು ತನ್ನ ಸಂಗಡಿಗರೊಂದಿಗೆ ಇಳಿದು ಬಂದು ಬಾಗಿಲು ತೆರೆದು ಮುಸಲ್ಮಾನರೊಡನೆ ಕಾದಾಡತೊಡಗಿದ. ಏತನ್ಮಧ್ಯೆ, ರೋಮನ್ನರು ಕೋಟೆಯ ಮೇಲಿನಿಂದ ತೀವ್ರ ಆಕ್ರಮಣ ಮಾಡಲು

ಪ್ರಾರಂಭಿಸಿದರು. ಈ ಸಮಯದಲ್ಲಿ, ಹಝ್ರತ್ ಉಮ್ಮ್ ಅಬಾನ್(ರ) ಒಂದು ಅವಕಾಶವನ್ನು ಕಂಡು ತೋಮಸ್‌ನ ಕಣ್ಣಿಗೆ ಬಾಣವನ್ನು ಹೊಡೆದರು ಮತ್ತು ಅವನ ಕಣ್ಣನ್ನು ಶಾಶ್ವತವಾಗಿ ಕುರುಡಾಗಿಸಿದರು. ಇದರ ಮೇಲೆ, ತೋಮಸ್ ತನ್ನ ಸಹಚರರೊಂದಿಗೆ ಹಿಮ್ಮೆಟ್ಟಬೇಕಾಯಿತು ಮತ್ತು ಅವನು ಕೋಟೆಯನ್ನು ಪ್ರವೇಶಿಸಿ ಬಾಗಿಲುಗಳನ್ನು ಮುಚ್ಚಿದನು. ಈ ಪರಿಸ್ಥಿತಿಯನ್ನು ನೋಡಿದ ಡಮಾಸ್ಕಸ್ ಜನರು ಈ ಕಾರಣದಿಂದಲೇ ನಮಗೆ ಅರಬ್ಬರೊಂದಿಗೆ ಯುದ್ಧವಾಡಲು ಸಾಕಾಗುವುದಿಲ್ಲ ಎಂದು ಹೇಳಿದೆವು. ಆದ್ದರಿಂದ, ಅರಬ್ಬರೊಂದಿಗೆ ಕೆಲವು ರೀತಿಯ ಸಮನ್ವಯವನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಕೋಪಗೊಂಡ ತೋಮಸ್ ತನ್ನ ಸಹಚರರಿಗೆ ನನ್ನ ಕಣ್ಣಿಗೆ ಬದಲಾಗಿ ಅವರ ಸಾವಿರ ಕಣ್ಣುಗಳನ್ನು ಕಿತ್ತು ಹಾಕುತ್ತೇನೆ ಎಂದು ಹೇಳಿದನು. (ಮರ್ದಾನೆ ಅರಬ್, ಭಾಗ-1, ಅಬ್ದುಸ್ಸತ್ತಾರೆ ಹಮ್ದಾನಿ, ಪುಟ-248-254, ಅಕ್ಬರ್ ಬುಕ್ ಸೇಲರ್ಸ್ ಲಾಹೋರ್)

ಡಮಾಸ್ಕಸ್‌ನ ಜನರು ಹಿಮ್ಸ್‌ನಿಂದ 20,000 ಸೈನಿಕರ ಸಹಾಯವನ್ನು ನಿರೀಕ್ಷಿಸಿದ್ದರು (ಸಯ್ಯಿದುನಾ ಉಮರ್ ಬಿನ್ ಖತ್ತಾಬ್(ರ), ಅಲಿ ಮುಹಮ್ಮದ್ ಅಲ್-ಸಲಾಬಿ, ಪುಟ-724), ಆದರೆ ಇಸ್ಲಾಮಿಕ್ ಸೈನ್ಯವು ಡಮಾಸ್ಕಸ್‌ಗೆ ಹೋಗುವ ರಸ್ತೆಯಲ್ಲಿ ಸೈನ್ಯದ ತುಕಡಿಯನ್ನು ನಿಯೋಜಿಸಲು ಯೋಜನೆಯನ್ನು ಮಾಡಿತು. ಹೀಗಾಗಿ ಹೋಮ್ಸ್ ನಿಂದ ಬರುತ್ತಿದ್ದ ಸೇನೆಯನ್ನು ಅಲ್ಲಿಯೇ ನಿಲ್ಲಿಸಲಾಯಿತು. ಮುಸ್ಲಿಮರು ಡಮಾಸ್ಕಸ್‌ಗೆ ಮುತ್ತಿಗೆ ಹಾಕಿದರು. ಇದರಲ್ಲಿ, ಅವರು ದಾಳಿ, ಬಿಲ್ಲುಗಾರಿಕೆ ಮತ್ತು ಕವಣೆಯಂತ್ರಗಳಿಂದ ಶತ್ರುಗಳನ್ನು ಕಿರುಕುಳ ನೀಡುತ್ತಿದ್ದರು. ಡಮಾಸ್ಕಸ್‌ನ ಜನರು ಸಹಾಯವನ್ನು ತಲುಪಲು ಸಾಧ್ಯವಿಲ್ಲ ಎಂದು ಮನವರಿಕೆಯಾದಾಗ ಮತ್ತು ಅವರಲ್ಲಿ ದೌರ್ಬಲ್ಯ ಮತ್ತು ಹೇಡಿತನವು ಬೆಳೆಯಿತು, ಅವರು ಮತ್ತಷ್ಟು ಹೋರಾಟವನ್ನು ತ್ಯಜಿಸಿದರು ಮತ್ತು ಅವರನ್ನು ಅಧೀನಗೊಳಿಸುವ ಬಯಕೆ ಮುಸ್ಲಿಮರ ಮನಸ್ಸಿನಲ್ಲಿ ಹೆಚ್ಚಾಯಿತು. (ತಾರಿಖ್ ಅಲ್-ತಬರಿ, ಸಂಪುಟ-2, ಪುಟಗಳು 357-358, ದಾರ್ ಅಲ್-ಕುತುಬ್ ಅಲ್-ಇಲ್ಮೀಯಾ ಬೈರುತ್ 2012)

ಚಳಿಗಾಲದ ಕಠೋರತೆಯಲ್ಲಿ ಮುಸ್ಲಿಮರು ಸುದೀರ್ಘ ಮುತ್ತಿಗೆಯ ಕಷ್ಟವನ್ನು ಸಹಿಸಲಾರರು ಎಂದು ಡಮಾಸ್ಕಸ್‌ನ ಜನರು ಭಾವಿಸಿದ್ದರು, ಆದರೆ ಮುಸ್ಲಿಮರು ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿದರು. ಡಮಾಸ್ಕಸ್ ಸುತ್ತಮುತ್ತಲಿನ ಖಾಲಿ ಮನೆಗಳನ್ನು ಮುಸ್ಲಿಮರು ತಮ್ಮ ಸೌಕರ್ಯಕ್ಕಾಗಿ ಬಳಸುತ್ತಿದ್ದರು. ಸಾಪ್ತಾಹಿಕ ಏರ್ಪಾಡಿನ ಪ್ರಕಾರ, ಮುಂಭಾಗದಲ್ಲಿದ್ದ ಸೈನ್ಯವು ಸರದಿಯಲ್ಲಿ ಬಂದು ವಿಶ್ರಾಂತಿ ಪಡೆಯುತ್ತಿದ್ದರು ಮತ್ತು ಅವರು ಹೋದಾಗ, ಇನ್ನೊಂದು ಸೈನ್ಯವು ಬಂದು ವಿಶ್ರಾಂತಿ ಪಡೆಯುತ್ತಿದ್ದರು ಮತ್ತು ಅಲ್ಲಿನದ್ವಾರಗಳಲ್ಲಿ ನೆಲೆಸಿರುವ ಮಿಲಿಟರಿ ಪಡೆಗಳ ಹಿಂದೆ ಅವರನ್ನು ಬೆಂಬಲಿಸಲು ಮತ್ತು ಮೇಲ್ವಿಚಾರಣೆ ಮಾಡಲು ಮತ್ತೊಂದು ಸೈನ್ಯವನ್ನು ನಿಯೋಜಿಸಲಾಗಿತ್ತು. ಈ ರೀತಿಯಾಗಿ, ಸುದೀರ್ಘ ಮುತ್ತಿಗೆಯನ್ನು ಜಯಿಸುವುದು ಸುಲಭವಾಯಿತು, ಆದರೆ ಮುಸ್ಲಿಮರು ಅಲ್ಲಿಗೆ ನಿಲ್ಲಲಿಲ್ಲ, ಅವರ ಕ್ಷೇತ್ರ ತನಿಖೆಗಳು ಮತ್ತು ಯುದ್ಧ ತಂತ್ರಗಳು ಶತ್ರುಗಳ ಸಂಘಟಿತ ಅಡೆತಡೆಗಳನ್ನು ಮುರಿಯಲು ತಮ್ಮ ಕೆಲಸವನ್ನು ಮುಂದುವರೆಸಿದವು ಮತ್ತು ಈ ವ್ಯವಸ್ಥಿತ ಮತ್ತು ಸುದೀರ್ಘ ಸರಣಿಯಲ್ಲಿ ಅಡೆತಡೆಗಳು, ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರನ್ನು ಡಮಾಸ್ಕಸ್ ಅನ್ನು ಪ್ರವೇಶಿಸಲು ಸಾಧ್ಯವಾಗುವಂತಹ ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡುವಲ್ಲಿ ಯಶಸ್ವಿಯಾದರು.

ಇದು ಡಮಾಸ್ಕಸ್‌ನ ಅತ್ಯುತ್ತಮ ಪ್ರದೇಶವಾಗಿತ್ತು. ಈ ಹಂತದಲ್ಲಿ ಖಂದಕದಲ್ಲಿ ನೀರು ಸಾಕಷ್ಟು ಆಳವಾಗಿದ್ದು, ಅಲ್ಲಿಂದ ಒಳಹೋಗಲು ಸಾಕಷ್ಟು ಕಷ್ಟದ ಕೆಲಸವಾಗಿತ್ತು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರು ಗೋಡೆಯನ್ನು ಏರಲು ಕೆಲವು ಹಗ್ಗಗಳನ್ನು ಸಂಗ್ರಹಿಸಿ ಡಮಾಸ್ಕಸ್‌ಗೆ ಪ್ರವೇಶಿಸುವ ಯೋಜನೆಯನ್ನು ರೂಪಿಸಿದರು ಮತ್ತು ಗೋಡೆಯನ್ನು ಹತ್ತಿ ಡಮಾಸ್ಕಸ್‌ಗೆ ಇಳಿಯಲು ಏಣಿಗಳಾಗಿ ಬಳಸಿದರು. ಹಝ್ರತ್ ಖಾಲಿದ್ ಬಿನ್ ವಲೀದ್ ಅವರಿಗೆ ಡಮಾಸ್ಕಸ್‌ನ ಪ್ರಕಾರ, ರೋಮನ್ ಸೈನ್ಯದ ಹತ್ತು ಸಾವಿರ ಸೈನ್ಯದ ಸೇನಾಧಿಪತಿಗೆ ಒಂದು ಮಗು ಜನಿಸಿದೆ ಎಂದು ಸುದ್ದಿ ಲಭಿಸಿತು, ಒಬ್ಬ ಸೇನಾಧಿಪತಿಯ ಮನೆಯಲ್ಲಿ ಮಗು ಜನಿಸಿದೆ ಮತ್ತು ಅವನ ಕಾವಲು ಸೈನಿಕರು ಸೇರಿದಂತೆ ಎಲ್ಲಾ ಜನರು ಔತಣದಲ್ಲಿ ನಿರತರಾಗಿದ್ದರು. ಹೀಗಾಗಿ ಅವರೆಲ್ಲರೂ ಚೆನ್ನಾಗಿ ತಿಂದು ಕುಡಿದು ನಶೆಯಲ್ಲಿ ನಿದ್ದೆಗೆ ಜಾರಿ ತಮ್ಮ ಜವಾಬ್ದಾರಿಯನ್ನು ನಿರ್ಲಕ್ಷಿಸಿದರು.

ಅದೇ ಸಮಯಕ್ಕೆ ಹಝ್ರತ್ ಖಾಲಿದ್ ಬಿನ್ ವಲೀದ್(ರ) ರವರು ತಮ್ಮ ಕೆಲವು ಸಹಚರರೊಂದಿಗೆ ಮಶ್ಕೀಝುಗಳ (ಚರ್ಮದ ಚಿಕ್ಕ ನೀರಿನ ಚೀಲಗಳ) ಸಹಾಯದಿಂದ ಕಂದಕವನ್ನು ದಾಟಿ ಗೋಡೆಯನ್ನು ತಲುಪಿದರು ಮತ್ತು ಗೋಡೆಗೆ ಹಗ್ಗಗಳನ್ನು ಏಣಿಯಾಗಿ ಕಟ್ಟಿ ಗೋಡೆಗೆ ಹಲವಾರು ಹಗ್ಗಗಳನ್ನು ನೇತುಹಾಕಿದರು. ಇದರ ಮೇಲೆ ಹೆಚ್ಚಿನ ಸಂಖ್ಯೆಯ ಮುಸ್ಲಿಮರು ಹಗ್ಗಗಳ ಸಹಾಯದಿಂದ ಗೋಡೆಯನ್ನು ಹತ್ತಿ ಒಳಗೆ ಇಳಿದು ಗೇಟ್‌ಗಳನ್ನು ತಲುಪಿದರು. ಬಾಗಿಲುಗಳ ಕೀಲುಗಳನ್ನು ಕತ್ತಿಯಿಂದ ಕತ್ತರಿಸಲಾಯಿತು. ಹೀಗೆ ಇಸ್ಲಾಮಿಕ್ ಸೇನೆಗಳು ಡಮಾಸ್ಕಸ್ ಪ್ರವೇಶಿಸಿದವು. (ಸಯ್ಯಿದುನಾ ಉಮರ್ ಬಿನ್ ಖತ್ತಾಬ್, ಅಲಿ ಮುಹಮ್ಮದ್ ಅಲ್-ಸಲಾಬಿ ಅವರಿಂದ, ಪುಟ 727-728, ಮುಕ್ತಾಬಾ ಅಲ್-ಫುರ್ಕಾನ್ ಮುಜಾಫರ್‌ಗರ್)

ಹಝ್ರತ್ ಖಾಲಿದ್(ರ) ಅವರ ಸೈನ್ಯವು ಪೂರ್ವ ದ್ವಾರವನ್ನು ಆಕ್ರಮಿಸಿಕೊಂಡಾಗ, ರೋಮನ್ನರು ಭಯಭೀತರಾಗಿ ಪಶ್ಚಿಮ ದ್ವಾರದಲ್ಲಿ ಸಂಧಾನಕ್ಕಾಗಿ ಹಝ್ರತ್ ಅಬು ಉಬೈದಾ(ರ) ಅವರನ್ನು ಕೇಳಿದರು, ಆದರೂ ಅವರು ಮುಸಲ್ಮಾನರಿಂದ ಸಂಧಾನದ ಕೋರಿಕೆಯನ್ನು ತಿರಸ್ಕರಿಸಿದ್ದರು ಮತ್ತು ಯುದ್ಧದ ಬಗ್ಗೆ ಅಚಲರಾಗಿದ್ದರು. ಹಝ್ರತ್ ಅಬು ಉಬೈದಾ(ರ) ಅವರು ಹರ್ಷಚಿತ್ತದಿಂದ ಸಂಧಾನವನ್ನು ಸ್ವೀಕರಿಸಿದರು. ಇದರ ಮೇಲೆ, ರೋಮನ್ನರು ಕೋಟೆಯ ದ್ವಾರಗಳನ್ನು ತೆರೆದರು ಮತ್ತು ಮುಸ್ಲಿಮರಿಗೆ ತ್ವರಿತವಾಗಿ ಬಂದು ಈ ದ್ವಾರದ ದಾಳಿಕೋರರಾದ ಹಝ್ರತ್ ಖಾಲಿದ್(ರ)ನಿಂದ ನಮ್ಮನ್ನು ರಕ್ಷಿಸಲು ಹೇಳಿದರು. ಪರಿಣಾಮವಾಗಿ ಮುಸ್ಲಿಮರು ಎಲ್ಲಾ ದ್ವಾರಗಳ ಮೂಲಕ ಶಾಂತಿಯುತವಾಗಿ ನಗರವನ್ನು ಪ್ರವೇಶಿಸಿದರು ಮತ್ತು ಹಝ್ರತ್ ಖಾಲಿದ್(ರ) ಅವರು ತಮ್ಮ ದ್ವಾರದಿಂದ ನಗರವನ್ನು ಪ್ರವೇಶಿಸಿದರು. ಹಝ್ರತ್ ಖಾಲಿದ್(ರ) ಮತ್ತು ಇತರ ನಾಲ್ಕು ಇಸ್ಲಾಮಿಕ್ ರಾಜಕುಮಾರರು ನಗರದ ಮಧ್ಯದಲ್ಲಿ ಪರಸ್ಪರ ಭೇಟಿಯಾದರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ರವರು ಯುದ್ಧದ ಮೂಲಕ ಡಮಾಸ್ಕಸ್‌ನ ಒಂದು ಭಾಗವನ್ನು ವಶಪಡಿಸಿಕೊಂಡಿದ್ದರೂ, ಹಝ್ರತ್ ಅಬು ಉಬೈದಾ(ರ) ರವರು ಸಂಧಾನವನ್ನು ಒಪ್ಪಿಕೊಂಡಿದ್ದರಿಂದ, ವಶಪಡಿಸಿಕೊಂಡ ಪ್ರದೇಶದಲ್ಲಿ ಸಂಧಾನದ ನಿಯಮಗಳನ್ನು ಸಹ ಅಂಗೀಕರಿಸಲಾಯಿತು. (ತಾರೀಖ್ ಅತ್ತಬರಿ, ಸಂಪುಟ-2, ಪುಟ 106-107, ಇದಾರಃ ಇಸ್ಲಾಮಿಯಾತ್ 2004)

ಕೆಲವು ಇತಿಹಾಸಕಾರರು ಹಝ್ರತ್ ಉಮರ್(ರ) ಅವರ ಆಳ್ವಿಕೆಯಲ್ಲಿ ಡಮಾಸ್ಕಸ್ನ ವಿಜಯವನ್ನು ವಿವರಿಸುತ್ತಾರೆ ಎಂಬುದು ಇಲ್ಲಿ ಸ್ಪಷ್ಟವಾಗಿರಬೇಕು, ಆದರೆ ಡಮಾಸ್ಕಸ್ನ ಈ ಯುದ್ಧವು ಹಝ್ರತ್ ಅಬುಬಕರ್ ಸಿದ್ದಿಕ್(ರ) ರವರ ಆಳ್ವಿಕೆಯಲ್ಲಿ ಪ್ರಾರಂಭವಾಯಿತು. ಆದಾಗ್ಯೂ, ಅವರ ವಿಜಯದ ಸುದ್ದಿಯನ್ನು ಮದೀನಾಕ್ಕೆ ಕಳುಹಿಸಿದಾಗ, ಆ ಸಮಯದಲ್ಲಿ ಹಝ್ರತ್ ಅಬುಬಕರ್(ರ) ಅವರು ಈಗಾಗಲೇ ನಿಧನ ಹೊಂದಿದ್ದರು. ಹಾಗಾಗಿ ಇದು ಹಝ್ರತ್ ಅಬೂಬಕರ್(ರ) ಅವರ ಕಾಲದ ಕೊನೆಯ ಯುದ್ಧವಾಗಿತ್ತು.

ಮುಂದಿನ ಬಾರಿ ಹಝ್ರತ್ ಅಬೂಬಕರ್(ರ)ರ ಜೀವಿತದ ಉಳಿದ ಮಗ್ಗಲುಗಳನ್ನು ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಮೊದಲನೆಯದಾಗಿ ದಕ್ಷಿಣ ಪೆಲಸ್ತೀನ್ ಜಮಾಅತಿನ ಸದರ್ ಆಗಿದ್ದ ಸನ್ಮಾನ್ಯ ಉಮರ್ ಅಬೂ ಅರ್ಕೂಬ್ ಸಾಹಿಬ್‌ರದ್ದಾಗಿದೆ. ಅವರು ಆಗಸ್ಟ್ 15ರಂದು 70ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಉಮರ್ ಅಬೂ ಅರ್ಕೂಬ್ ಸಾಹಿಬ್‌ರು 2010ರಲ್ಲಿ ಎಂ.ಟಿ.ಎ. ಅಲ್ ಅರಬಿಯದ ಮೂಲಕ ಜಮಾಅತಿನ ಬಗ್ಗೆ ಅರಿತುಕೊಂಡರು. ಅದರ ಬಗ್ಗೆ ಅವರು ಹೀಗೆ ಹೇಳಿದ್ದರು: ನಾನು ಮೊದಲ ಬಾರಿಗೆ ಎಂ.ಟಿ.ಎ. ನೋಡಿದಾಗ, ಈ ಜನರು ಒಳ್ಳೆಯ ಮತ್ತು ಸಾತ್ವಿಕ ಜನರಾಗಿರುವರು ಎಂದು ನನಗೆ ಅನುಭವವಾಗುತ್ತಿತ್ತು. ಕೊಲೆ, ರಕ್ತಪಾತ, ದರೋಡೆ, ಕಳ್ಳತನ, ಪರಸ್ಪರ ಹಗೆತನದ ಸ್ಥಿತಿಯಲ್ಲಿ ಇಸ್ಲಾಮಿಕ ಲೋಕವನ್ನು ನಾನು ಒಂದೆಡೆ ನೋಡುತ್ತಿದ್ದೆ. ಮತ್ತೊಂದೆಡೆ ಅಹ್ಮದಿಯಾ ಜಮಾಅತ್ ಕರುಣೆಯ ಪಾಠವನ್ನು ನೀಡುತ್ತಿತ್ತು. ತಹಜ್ಜುದ್ ನಿರ್ವಹಿಸಲು ಮತ್ತು ಪವಿತ್ರ ಖುರ್‌ಆನ್ ಓದಲು ತಾಕೀತು ಮಾಡುತ್ತಿತ್ತು. ಇದರಿಂದ ನಾನು ಸಾಕಷ್ಟು ಪ್ರಭಾವಿತನಾದೆನು ಮತ್ತು ಇದೇ ಸತ್ಯ ಜಮಾಅತ್ ಆಗಿದೆ ಮತ್ತು ಈ ಜಮಾಅತಿಗೆ ನಾವು ವಿಧೇಯರಾಗಿರಬೇಕು ಎಂದು ನಾನು ಹೇಳಿದೆ. ಇಸ್ತಿಖಾರ ನಮಾಝಿನ ನಂತರ ನನಗೆ ದೃಢವಿಶ್ವಾಸವಾಯಿತು. ಇದೇ ಸತ್ಯ ಜಮಾಅತ್ ಎಂದು ತಿಳಿಸುವ ಒಂದು ಕನಸನ್ನು ಕೂಡ ನಾನು ಕಂಡೆನು. ನಾನು ನನ್ನ ಮರಣದ ತನಕ ಈ ಜಮಾಅತಿನಲ್ಲಿ ಸೇರಿಕೊಂಡಿರುವೆನು ಎಂದು ನಾನು ಪ್ರತಿಜ್ಞೆ ಮಾಡಿದೆ. ಪ್ರತಿಯೊಂದು ಕಷ್ಟದ ಸಮಯದಲ್ಲಿ ದಿವಂಗತರು ಬಹಳ ಸ್ಥೈರ್ಯದಿಂದ ಇರುತ್ತಿದ್ದರು. ಇವರು ಬೈಅತ್ ಮಾಡಿದ ನಂತರ ಅವರ ಪತ್ನಿಯು ಹೀಗೆ ಕನಸನ್ನು ಕಂಡಿದ್ದರು: ಕೆಲವು ಅಹ್ಮದಿಯರು ಸನ್ಮಾನ್ಯ ಉಮರ್

ಸಾಹಿಬ್‌ರನ್ನು ತನ್ನ ಮನೆಯ ಒಂದು ಕೊಠಡಿಗೆ ಕೊಂಡು ಹೋದರು. ಅಹ್ಮದಿಯರು ಅವರನ್ನು ಸ್ನಾನ ಮಾಡಿಸಿ ಅವರ ಎದೆಯನ್ನು ತೆರೆದು ಶುಚಿಗೊಳಿಸಿದರು. ನಾವು ನಿಮ್ಮ ಪತಿಯನ್ನು ಅತ್ಯುತ್ತಮ ಸ್ಥಿತಿಯಲ್ಲಿ ಮರಳಿ ತಂದಿರುವೆವು ಎಂದು ಅವರು ನನ್ನೊಡನೆ ಹೇಳಿದರು. ಖಿಲಾಫತಿನೊಂದಿಗೆ ಅವರು ಅಪಾರವಾದ ಪ್ರೀತಿಯನ್ನು ಹೊಂದಿದ್ದರು. ಬಹಳ ದುಆ ಮಾಡುತ್ತಿದ್ದರು. ಜಮಾಅತಿನೊಂದಿಗೆ ನಿಷ್ಠೆಯನ್ನು ಹೊಂದಿದ್ದರು. ಮನೆಯ ಗ್ರೌಂಡ್ ಫ್ಲೋರಿನ ಭಾಗವನ್ನು ಜಮಾಅತಿಗಾಗಿ ವಖ್ಫ್ ಮಾಡಿದ್ದರು. ದಕ್ಷಿಣ ಪೆಲಸ್ತೀನ್ ಜಮಾಅತಿನ ಸದಸ್ಯರು ಜುಮಾ, ಈದ್‌ಗಳು ಮತ್ತು ಜಮಾಅತಿನ ಕಾರ್ಯಕ್ರಮಗಳಿಗೆ ಅಲ್ಲಿ ಒಟ್ಟುಗೂಡುತ್ತಿದ್ದರು. ಮನೆಯ ಆ ಭಾಗ ಜಮಾಅತಿಗೆ ವಖ್ಫ್ ಆಗಿರುವುದು ಎಂಬುದು ದಿವಂಗತರ ಉಯಿಲಾಗಿದೆ ಎಂದು ಅವರ ಮಗನು ಹೇಳಿರುವರು. ಅವರು ರೋಗಗ್ರಸ್ತರಾಗಿ ಇದ್ದಾಗ ಅವರ ವಿರೋಧಿಗಳು ಹೇಳಿದರು: ನೀವು ಜಮಾಅತಿನಿಂದ ತೌಬ ಮಾಡಿರಿ, ನೀವು ರೋಗದಿಂದ ಮುಕ್ತರಾಗುವಿರಿ. ಆದಾಗ್ಯೂ ದಿವಂಗತರು ಅವರೊಂದಿಗೆ ತಬ್ಲೀಗ್ ಸಂವಾದ ನಡೆಸುತ್ತಿದ್ದರು. ಬಹಳವಾಗಿ ಮಾತನಾಡುವ ಮತ್ತು ವಿರೋಧಿಸುವ ಒಬ್ಬ ವ್ಯಕ್ತಿಯೊಂದಿಗೆ ಅವರು ಸಂವಾದ ನಡೆಸಿದಾಗ, ಅವನು ನಿರುತ್ತರನಾದನು. ರೋಗ ಬಹಳ ತೀವ್ರವಾದಾಗ, ಅವರನ್ನು ಐ.ಸಿ.ಯು.ಗೆ ದಾಖಲು ಮಾಡಬೇಕಾಯಿತು. ಸಂವಾದದ ನಡುವೆ ಅವರ ಮಗನು ಬಹಳವಾಗಿ ವಿರೋಧಿಸುವ ಮತ್ತು ಮಾತನಾಡುವ ಮುಲ್ಲಾನೊಂದಿಗೆ ಹೇಳಿದರು: ನನ್ನ ತಂದೆಯನ್ನು ಬಿಡು, ಅವರಿಗೆ ತುಂಬ ಅನುಭವಜ್ಞಾನವಿದೆ. ನೀವು ಅವರನ್ನು ಒಪ್ಪುವಂತೆ ಮಾಡಲಾರಿರಿ. ಮರಣಾಸನ್ನರಾದಾಗ, ದಿವಂಗತರು ಮಗನೊಡನೆ ಹೀಗೆ ಹೇಳಿದ್ದರು: ನನ್ನ ಮರಣದಿಂದ ನೀವು ನಿರಾಶೆಗೊಳ್ಳಬಾರದು. ಅನಂತರ ಅವರು ಹಝ್ರ‌ತ್ ಬಿಲಾಲ್(ರ)ರ ಹೇಳಿಕೆಯನ್ನು ಹೇಳುತ್ತಿದ್ದರು: ನಾನು ನಾಳೆ ನನ್ನ ಪ್ರಿಯ ಹಝ್ರ‌ತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರನ್ನು ಭೇಟಿಯಾಗುವೆನು.
(ಶರಹ್ ಅಝ್ಝುರ್‌ಖಾನಿ ಅಲಲ್ ಮವಾಹಿಬ್, ಸಂಪುಟ–1, ಪುಟ–499, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ದಿವಂಗತರು ಬಹಳ ಸ್ನೇಹಮಯಿ ಮತ್ತು ಪ್ರೀತಿಯ ವ್ಯಕ್ತಿತ್ವವನ್ನು ಹೊಂದಿದ್ದರು. ದಿವಂಗತರು ಪತ್ನಿಯನ್ನು, ಮೂವರು ಪುತ್ರಿಯರನ್ನು ಮತ್ತು ನಾಲ್ವರು ಪುತ್ರರನ್ನು ಅಗಲಿರುವರು. ಮಕ್ಕಳಿಗೂ ಅಹ್ಮದಿಯ್ಯತ್ ಸ್ವೀಕಾರ ಮಾಡಲು ಅಲ್ಲಾಹನು ಸೌಭಾಗ್ಯ ನೀಡಲಿ. ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ. ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಎರಡನೇ ಜನಾಝ಼ ಮಿಠಿ ಥರ್‌ಪಾರ್‌ಕಾರಿನ ಸನ್ಮಾನ್ಯ ಶೇಖ಼್ ನಾಸಿರ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಅವರು ಕೆಲವು ದಿನಗಳಿಗೆ ಮುಂಚಿತವಾಗಿ 93ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮಿಠಿಯ ಮೊದಲ ಅಹ್ಮದಿಯಾಗಿದ್ದರು. 1969ರಲ್ಲಿ ಅವರು ಅಹ್ಮದಿಯ್ಯತ್ ಸ್ವೀಕಾರ ಮಾಡಿದ್ದರು. ತಬ್ಲೀಗ್ ಮಾಡುವ ಆವೇಶಭರಿತ ವ್ಯಕ್ತಿಯಾಗಿದ್ದರು. ಧರ್ಮದ ಬಗ್ಗೆ ಅಭಿಮಾನವಿದ್ದ ಮತ್ತು ನಿರ್ಭೀತರಾದ ಅಹ್ಮದಿಯಾಗಿದ್ದರು. ಐದು ಹೊತ್ತಿನ ನಮಾಝ಼ನ್ನು ನಿರ್ವಹಿಸುವವರೂ, ಅತಿಥಿ ಸತ್ಕಾರಿಯೂ ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೇಮ ಅವರ ವೈಶಿಷ್ಟ್ಯವಾಗಿತ್ತು. ಅವರಿಗೆ ಮಿಠಿಯಲ್ಲೂ ಮತ್ತು ಅದರ ಸುತ್ತ ಮುತ್ತ ಪ್ರದೇಶಗಳಲ್ಲೂ ಅನೇಕ ಬೈಅತ್‌ಗಳನ್ನು ಮಾಡುವ ಸೌಭಾಗ್ಯ ಲಭಿಸಿತ್ತು. ಮಿಠಿಯ ಮೊದಲ ಮಸೀದಿಯನ್ನು ಅವರು ಕೊಟ್ಟ ಜಾಗದಲ್ಲಿ ನಿರ್ಮಾಣ ಮಾಡಲಾಗಿತ್ತು. ಕುಟುಂಬ ಮತ್ತು ಬಾಂಧವರ ಕಡೆಯಿಂದ ಅವರಿಗೆ ಕಠಿಣವಾದ ವಿರೋಧವನ್ನು ಎದುರಿಸಬೇಕಾಗಿ ಬಂದಿತ್ತು. ವಿಶೇಷವಾಗಿ ಮಕ್ಕಳ ವಿವಾಹ ಸಮಯವಾದಾಗ ಕುಟುಂಬದಿಂದ ಹೊರಗೆ ಅಹ್ಮದಿಯರೊಂದಿಗೆ ವಿವಾಹ ಸಂಬಂಧವನ್ನು ಮಾಡುವುದರಿಂದ ತಡೆಯಲು ಬಹಳ ಒತ್ತಡ ಹೇರಲಾಗಿತ್ತು. ಅವರನ್ನು ಬಹಿಷ್ಕರಿಸಲಾಯಿತು. ಮಕ್ಕಳ ವಿವಾಹದಲ್ಲಿ ಭಾಗಿಯಾಗಲಿಲ್ಲ. ಆದರೆ ಅಲ್ಲಾಹನ ವಿಶೇಷ ಅನುಗ್ರಹದಿಂದ ಅವರು ವಿರೋಧವಿದ್ದರೂ ಎಲ್ಲ ಮಕ್ಕಳ ವಿವಾಹವನ್ನು ಅಹ್ಮದೀ ಮನೆತನದಲ್ಲಿ ಮಾಡಿಸಿದರು. ಅವರು ತನ್ನ ಮಕ್ಕಳ ತರಬೇತಿಯ ಕಡೆಗೆ ವಿಶೇಷ ಗಮನ ಹರಿಸಿದ್ದರು. ಎಲ್ಲರಿಗೂ ಪವಿತ್ರ ಖುರ್‌ಆನ್ ಕಲಿಸಿದರು ಮತ್ತು ನಮಾಝ಼್್ ನಿರ್ವಹಿಸುವವರನ್ನಾಗಿ ಮಾಡಿದರು. ಮೊದಲು ಹಿಂದುಗಳಾಗಿದ್ದ ಪತ್ನಿ ಮತ್ತು ಇತರ ಮಹಿಳೆಯರು ಸಾಂಪ್ರದಾಯಕ ಉಡಿಗೆಯನ್ನು ಬದಲಿಸಿ ಬುರ್ಖಾ ಧರಿಸುವಂತೆ ಮಾಡಿದರು.

ಹಝ್ರ‌ತ್ ಖ಼ಲೀಫತುಲ್ ಮಸೀಹ್ ರಾಬಿ(ರಹ್) ಅವರನ್ನು ಶ್ಲಾಘಿಸುತ್ತಾ ಒಂದು ಬಾರಿ ಹೀಗೆ ಹೇಳಿದರು: ನಾವು ಪ್ರತಿಯೊಂದು ಸೆಂಟರ್‌ನಲ್ಲಿ ಒಬ್ಬ ಅನ್ಸಾರ್ ಸದಸ್ಯನನ್ನು ಇರಿಸಿದರೆ, ನಾವು ಖಂಡಿತ ಯಶಸ್ಸು ಪಡೆಯುವೆವು. ದಿವಂಗತರು ಇಬ್ಬರು ಪುತ್ರರನ್ನು ಮತ್ತು ನಾಲ್ವರು ಪುತ್ರಿಯರನ್ನು ಅಗಲಿರುವರು. ಅವರ ಕೆಲವು ಮಕ್ಕಳು ದೀನಿನ ಸೇವೆ ಮಾಡುತ್ತಿರುವರು. ವಖ್ಫೇ ಝಿಂದಗಿಯಾಗಿರುವರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ.

ಮೂರನೇ ಜನಾಝ಼ ವಖ್ಫೇ ಜದೀದಿನ ಮಾಜಿ ಮುಅಲ್ಲಿಂ ಆಗಿದ್ದ ಮಲಿಕ್ ಸುಲ್ತಾನ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳಿಗೆ ಮುಂಚಿತವಾಗಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. 1938ರಲ್ಲಿ ಝಂಗ್ ಜಿಲ್ಲೆಯಲ್ಲಿ ಜನಿಸಿದರು. ಜನ್ಮತಃ ಅಹ್ಮದಿಯಾಗಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆಯಾದ ಸನ್ಮಾನ್ಯ ಸಜ್ಜಾದ್ ಸಾಹಿಬುಲ್ ಮಾರೂಫರ ಮೂಲಕ ಪ್ರವೇಶಿಸಿತ್ತು. ಅವರು ಹಝ್ರ‌ತ್ ಮುಸ್ಲಿಹ್ ಮೌಊದ್(ರ)ರ ಕಾಲಘಟ್ಟದಲ್ಲಿ ಸ್ವತಃ ಖಾದಿಯಾನಿಗೆ ಹೋಗಿ ಬೈಅತ್ ಮಾಡಿದ್ದರು. ಅವರು ಹೈಸ್ಕೂಲ್ ಮುಗಿಸಿದ ನಂತರ 1960ರಲ್ಲಿ ವಖ್ಫೇ ಜದೀದಿನ ಅಧೀನದಲ್ಲಿ ಸೇವೆ ಮಾಡಲು ಅರ್ಜಿ ಕೊಟ್ಟರು. ಅವರ ವಖ್ಫ್ ಸ್ವೀಕಾರವಾಯಿತು. ಅನಂತರ ಖ಼ಲೀಫತುಲ್ ಮಸೀಹ್ ರಾಬೀ(ರಹ್) ವಖ್ಫೇ ಜದೀದಿನ ಇಂಚಾರ್ಜ್ ಆಗಿದ್ದಾಗ ಅವರಿಂದ ತರಬೇತಿ ಪಡೆದರು. ಕೆಲವು ಕಾಲ ಅಲ್ಲಿಂದ ತರಬೇತು ಪಡೆದು 1960ರಲ್ಲಿ ಅವರನ್ನು ಮುಅಲ್ಲಿಂ ಆಗಿ ನೇಮಿಸಲಾಯಿತು. ಥರ್‌ಪಾರ್‌ಕರಿನ ಪ್ರದೇಶಕ್ಕೆ ಕಳುಹಿಸಲಾಯಿತು. ಉತ್ತಮವಾಗಿ ಅವರು ಕೆಲಸ ಮಾಡಿದರು. ಅನಂತರ ಪಾಕಿಸ್ತಾನದ ಇತರ ಪ್ರದೇಶಗಳಲ್ಲೂ ಇದ್ದರು. 38 ವರ್ಷಗಳಿಗೂ ಮೇಲ್ಪಟ್ಟು ಅವರು ಸೇವೆ ಸಲ್ಲಿಸಿದ್ದರು. ತನಗೆ ಒಪ್ಪಿಸಲಾದ ಕರ್ತವ್ಯಗಳನ್ನು ಬಹಳ ಉತ್ತಮ ರೀತಿಯಲ್ಲಿ ಮಾಡುತ್ತಿದ್ದರು. ತಬ್ಲೀಗ್ ಮಾಡಲು ಬಹಳ ಆಸಕ್ತಿ ಹೊಂದಿದ್ದರು. ಅದೇ ಕಾರಣದಿಂದ 1968ರಲ್ಲಿ ಅವರ ಮೇಲೆ ಮಾರಕ ಹಲ್ಲೆ ಕೂಡ ನಡೆದಿತ್ತು. ಸತ್ಯಸಂಧತೆ, ಅತಿಥಿ ಸತ್ಕಾರ, ಹಸನ್ಮುಖಿಯಾಗಿರುವುದು ಅವರ ಪ್ರಧಾನ ವೈಶಿಷ್ಟ್ಯಗಳಾಗಿದ್ದುವು. ತಹಜ್ಜುದ್ ನಿರ್ವಹಿಸುವವರೂ, ಜಮಾಅತಾದ ನಮಾಝ಼ನ್ನು ಪಾಲಿಸುವವರೂ ದುಆ ಮಾಡುವವರೂ ಆಗಿದ್ದರು. ಮರಣದ ವರೆಗೂ ಖಿಲಾಫತಿನೊಂದಿಗೆ ನಿಷ್ಠೆಯ ಸಂಬಂಧವನ್ನು ಇರಿಸಿದ್ದರು. ತನ್ನ ಮಕ್ಕಳಿಗೂ ಅದರ ತಾಕೀತು ಮಾಡುತ್ತಿದ್ದರು. ದಿವಂಗತರು ತನ್ನ ಪತ್ನಿಯನ್ನಲ್ಲದೇ ಮೂವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ.

ಮುಂದಿನ ಜನಾಝ಼ ಸನ್ಮಾನ್ಯ ಮಹ್ಬೂಬ್ ಅಹ್ಮದ್ ರಾಜೇಕಿ ಸಾಹಿಬ್‌ರದ್ದಾಗಿದೆ. ಅವರು ಸಅದುಲ್ಲಾಹ್‌ಪುರ ಮಂಡಿ ಬಹಾಉದ್ದೀನಿನ ನಿವಾಸಿಯಾಗಿದ್ದರು. ಅವರು ಕೂಡ ಕೆಲವು ದಿನಗಳಿಗೆ ಮುಂಚಿತವಾಗಿ 86ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಇಬ್ಬರು ಪುತ್ರರನ್ನು ಮತ್ತು ಒಬ್ಬಳು ಪುತ್ರಿಯನ್ನು ಅಗಲಿರುವರು. ಅವರ ಒಬ್ಬ ಪುತ್ರ ಜರ್ಮನಿಯಲ್ಲಿದ್ದಾನೆ. ಕೆಲವರು ಲಾಹೋರಿನಲ್ಲಿರುವರು. ಅವರು ಹಝ್ರ‌ತ್ ಮಸೀಹ್ ಮೌಊದ್(ಅ)ರ ಸಹಾಬಿಯಾದ ಗ಼ುಲಾಂ ಅಲಿ ಸಾಹಿಬ್ ರಾಜೇಕಿ(ರ)ರ ಪುತ್ರ ಮತ್ತು ಹಝ್ರ‌ತ್ ಮೌಲವಿ ಗ಼ುಲಾಂ ರಸೂಲ್ ಸಾಹಿಬ್ ರಾಜೇಕಿ(ರ)ರ ಸಹೋದರ ಪುತ್ರರಾಗಿದ್ದರು. ಹಝ್ರ‌ತ್ ಮೌಲವಿ ಗ಼ೌಸ್ ಮುಹಮ್ಮದ್ ಸಾಹಿಬ್‌ರ ಮೊಮ್ಮಗರಾಗಿದ್ದರು.

ಅವರ ಮಗನಾದ ಮಬ್ರೂರ್ ಸಾಹಿಬ್ ಹೇಳುತ್ತಾರೆ: ಅವರಿಗೆ 37 ವರ್ಷಗಳ ಕಾಲ ಸಆದುಲ್ಲಾಹ್‌ಪುರ ಜಮಾಅತಿನಲ್ಲಿ ಸದರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಬಹಳವಾಗಿ ದುಆ ಮಾಡುವವರೂ, ಹಝ್ರ‌ತ್ ಪೈಗಂಬರ್(ಸ), ಹಝ್ರ‌ತ್ ಮಸೀಹ್ ಮೌಊದ್(ಅ) ಮತ್ತು ಖಿಲಾಫತಿನ ಪ್ರೇಮಿಯಾಗಿದ್ದರು. ನಿರ್ಭೀತ ಮತ್ತು ಧೈರ್ಯಶಾಲಿ ಸೇವಕರಾಗಿದ್ದರು. ಮೂರು ಬಾರಿ ಅವರಿಗೆ ಅಲ್ಲಾಹನ ಮಾರ್ಗದಲ್ಲಿ ಸೆರೆಮನೆ ವಾಸ ಮಾಡಬೇಕಾಗಿ ಬಂದಿತ್ತು. ಐದು ಹೊತ್ತಿನ ನಮಾಝ಼್‌ನೊಂದಿಗೆ ನಿಯತವಾಗಿ ದೀರ್ಘವಾದ ತಹಜ್ಜುದ್ ನಮಾಝ಼್ ನಿರ್ವಹಿಸುವವರಾಗಿದ್ದರು. ಅನೇಕ ಸಂದರ್ಭಗಳಲ್ಲಿ ಅಲ್ಲಾಹನು ಅವರ ದುಆಗಳನ್ನು ತಕ್ಷಣವೇ ಸ್ವೀಕಾರ ಮಾಡಿದ್ದನು. ಸತ್ಯವಾದ ಕನಸು ಮತ್ತು ದರ್ಶನ ಕಾಣುವವರಾಗಿದ್ದರು. ಜೈಲುವಾಸದ ವೇಳೆಯೂ ಅವರು ಅನೇಕ ಬಾರಿ ಸತ್ಯವಾದ ಕನಸು ಕಂಡಿದ್ದರು. ಯಾವ ದಿನದಂದು ಬಿಡುಗಡೆ ಆಗುವುದು ಮತ್ತು ಯಾವ ದಿನದಂದು ಯಾವ ಘಟನೆ ನಡೆಯುವುದು ಎಂದು ಕನಸಿನಲ್ಲಿ ಕಾಣುತ್ತಿದ್ದರು. ಅದೇ ರೀತಿಯಲ್ಲಿ ಅವುಗಳು ಸಂಭವಿಸುತ್ತಿದ್ದುವು. ದಿನದ ಬಹುತೇಕ ಸಮಯ ದುರೂದ್ ಶರೀಫ್ ಮತ್ತು ದುಆದಲ್ಲಿ ನಿರತರಾಗುತ್ತಿದ್ದರು. ಒಂದು ವ್ಯಕ್ತಿ ಹೀಗೆ ಬರೆದಿರುವರು: ಒಂದು ದಿನ ನಾನು ಫಜ್ರಿನ ಸಮಯದಲ್ಲಿ ಮಸೀದಿಗೆ ಬಂದು ಅವರ ದೇಹದಲ್ಲಿ ಕೈಯಿಟ್ಟು ನೋಡಿದಾಗ ಅವರಿಗೆ ತೀವ್ರ ಜ್ವರವಿತ್ತು. ಹೀಗಿದ್ದರೂ ಅವರು ಮಸೀದಿಗೆ ಬಂದಿದ್ದರು. ಎಂ.ಟಿ.ಎ. ಮತ್ತು ಖಿಲಾಫತಿನೊಂದಿಗೆ

ಅವರ ಪ್ರೇಮದ ಸ್ಥಿತಿ ಏನಾಗಿತ್ತು ಎಂದರೆ, ವಯಸ್ಸಾದ ಕಾರಣದಿಂದ ಕಿವಿ ಅಷ್ಟಾಗಿ ಕೇಳಿಸದ ಕಾಲದಲ್ಲೂ ಖುತ್ಬದ ಸಮಯದಲ್ಲಿ ಟಿ.ವಿ.ಯ ಮುಂದೆ ಕುಳಿತು ಆಲಿಸಲು ಪ್ರಯತ್ನಿಸುತ್ತಿದ್ದರು. ಅವರು ನಿಧನರಾದಾಗ, ಸುತ್ತಮುತ್ತಲಿನ ಅನೇಕ ಅಹ್ಮದಿಯೇತರರು ಬಂದಿದ್ದರು. ಮೊದಲು ಸಹ ಬರುತ್ತಿದ್ದರು. ಅವರ ಮೇಲೆ ತುಂಬ ವಿಶ್ವಾಸವಿರಿಸಿದ್ದರು. ಅವರಿಂದ ದುಆ ಮಾಡಿಸುತ್ತಿದ್ದರು. ನಿಧನದ ನಂತರ ಅವರು ಶ್ರದ್ಧಾಂಜಲಿ ಅರ್ಪಿಸಲು ಬಂದಿದ್ದರು. ಜನರು ಹೇಳುತ್ತಿದ್ದರು: ಇವರು ಅಹ್ಮದಿಯಾಗಿರದೇ ಇರುತ್ತಿದ್ದರೆ, ಇವರಿಗೆ ನೂರಾರು ಸಾವಿರಾರು ಶಿಷ್ಯರು ಇರುತ್ತಿದ್ದರು. ಅವರ ದುಆ ಸ್ವೀಕಾರದ ಘಟನೆಗಳನ್ನು ಮತ್ತು ಅದರ ಉದಾಹರಣೆಗಳನ್ನು ಅನೇಕ ಅಹ್ಮದಿಯೇತರರು ಹೇಳಿರುವರು.

ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಜುಮಾ ನಮಾಝಿನ ನಂತರ ಎಲ್ಲ ದಿವಂಗತರ ಜನಾಝ ನಮಾಝ್ ನಿರ್ವಹಿಸುವೆನು. ಇನ್‌ಶಾ ಅಲ್ಲಾಹ್.

********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅಂಧನಾಗಿ ಬಿಡುತ್ತಾನೆ. ಈಗ ವಾಸ್ತವವನ್ನು ಆಲಿಸಿರಿ. ಪವಿತ್ರ ಖುರ್‌ಆನ್‌ನಲ್ಲಿ ಆಕಾಶ ಪದವು ಎಲ್ಲೆಲ್ಲಿ ಬಂದಿರುತ್ತದೆ. ಅಲ್ಲಲ್ಲಿ ಅದರ ಅರ್ಥ ಅಲ್ಲಾಹನ ಘನತೆ, ಶಕ್ತಿ ಮತ್ತು ಎತ್ತರವನ್ನು ಸೂಚಿಸುತ್ತದೆ.

**ಪವಿತ್ರ ಖುರ್‌ಆನ್‌ನ ಒಂದು ಮಾತನ್ನು ಸಹ ರದ್ದುಗೊಳಿಸಬಹುದಾದರೆ ಯಾವ ದಂಡ ಬೇಕಾದರೂ ನಮ್ಮಿಂದ ಪಡೆದುಕೊಳ್ಳಲಿ.**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಮೂಢ ಮನುಷ್ಯನು ದ್ವೇಷದಿಂದ ಕೂಡಿರುವವನು ಒಂದು ಮಾತನ್ನು ತನ್ನ ಬಾಯಿಯಿಂದ ಹೊರಡಿಸಿದರೆ, ಅದನ್ನು ನಿರ್ಣಯಿಸಿಕೊಳ್ಳುವ ಮನಸ್ಸು ಮಾಡುವುದಿಲ್ಲ. ಆರ್ಯ ಸಾಹೇಬರ ಅದೇ ಅವಸ್ಥೆಯಾಗಿದೆ. ಅಂದರೆ ಅವರು ಇಹಲೋಕದಲ್ಲಿ ಶಾಶ್ವತವಿರುವರು. ಹಾಗಿಲ್ಲದಿದ್ದರೆ ನಾವು ಹೇಳುತ್ತೇವೆ. ಪವಿತ್ರ ಖುರ್‌ಆನ್‌ನಿಂದ ಒಂದು ಮಾತನ್ನು ಸಹ ರದ್ದುಪಡಿಸಿತೋರಿಸಿದರೆ ನೀವು ಬಯಸಿದ ದಂಡವನ್ನು ತೆರುವೆವು. ನೀವು ನಮ್ಮ ಎಲ್ಲಾ ಆಸ್ತಿಯನ್ನು ಪಡೆದುಕೊಳ್ಳಿರಿ. ಆದರೆ ಯಾರೊಬ್ಬರಿಗಾದರೂ ಸಮಾಧಾನದಿಂದ ನ್ಯಾಯಾಲಯದಲ್ಲಿ ಮೊಕದ್ದಮೆಗಳ ತೀರ್ಪು ಆಗುವಂತೆ, ತೀರ್ಪು ಪಡೆಯುವ ಮನಸ್ಸು ಇದೆಯೇ, ಖಂಡಿತ ಇಲ್ಲ. ಅಂದ ಮೇಲೆ ಅಲ್ಲಾಹನು ಸ್ವಯಂ ನಿಮ್ಮ ಕುರಿತು ತಿರ್ಪು ನೀಡುವವರೆಗೆ ಸಹನೆ ವಹಿಸಿರಿ. (ಅದೇ ಪುಟ 469).

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್! ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಸವಾಲು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

**ತಕೂನ ಉಮ್ಮತುನ್ ಹಿಯಾ ಅರ್‌ಬಾ ಮಿನ್ ಉಮ್ಮತಿನ್; ಇನ್ನಮಾ ಯಬ್ಲು ಕುಮುಲ್ಲಾಹು ಬಿಹೀ ವಲಯುಬೈಯ್ಯಿನನ್ನ ಲಕುಮ್ ಯೌಮಲ್ ಖಿಯಮತಿ ಮಾ ಕುಂತುಮ್ ಫೀಹೀ ತಖ್ತಲಿಫೂನ್** ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಈ ಅಯತ್‌ನ ಪದಗಳಿಂದ ನಮಗೆ ತಿಳಿದು ಬರುವುದೇನೆಂದರೆ: ಇದು ಅನ್ಯ ಜನರೊಂದಿಗಿನ ಒಪ್ಪಂದಗಳನ್ನೂ ಉಲ್ಲೇಖಿಸುತ್ತದೆ. ಈ ವಿಷಯದ ಪರಿಭಾಷೆಯಲ್ಲಿ, ಈ ಆಯತನ್ನು ಶಾಶ್ವತ ವಿಷಯವೆಂದು ಘೋಷಿಸಬೇಕು. ಅಂದರೆ **ಲಾತಕೂನೂ** ದಿಂದ ಹೊಸ ವಿಷಯವನ್ನು ಪ್ರಾರಂಭವಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಇದರರ್ಥ ಸರ್ವಶಕ್ತನಾದ ಅಲ್ಲಾಹನ ಒಪ್ಪಂದ ಮತ್ತು ಒಬ್ಬನ ಆಂತರಿಕ ಒಪ್ಪಂದವನ್ನು ಪಾಲಿಸುವುದು ಹೇಗೆ ಅಗತ್ಯವೋ ಅದೇ ರೀತಿ ಅನ್ಯ ರಾಷ್ಟ್ರಗಳೊಂದಿಗೆ ಮಾಡಿದ ಒಪ್ಪಂದಗಳನ್ನು ಪಾಲಿಸುವುದು ಸಹ ಅಗತ್ಯವಾಗಿದೆ. ಈ ಒಪ್ಪಂದಗಳನ್ನು ನೋಡಿಕೊಳ್ಳಿ, ಇಲ್ಲದಿದ್ದರೆ ಪ್ರಪಂಚದ ಶಾಂತಿಯು ನಾಶವಾಗುತ್ತದೆ. ಆದ್ದರಿಂದ, **ದಖಲ** ಎಂಬ ಪದವು ಅದೇ ವಿಷಯವನ್ನು ತೋರಿಸುತ್ತದೆ ಮತ್ತು ಅದೇ ವಿಷಯವನ್ನು **ಕಲ್ಲತಿ ನಖುಝುತ್ ಗಝ್‌ಲಹಾ ಮಿಮ್ ಬಅ್‌ದಿ ಖುವ್ವತಿನ್** ನಿಂದ ಶಾಂತಿ ಸ್ಥಾಪನೆಯ ನಂತರ, ದುಷ್ಕೃತ್ಯದ ನೋಟವನ್ನು ಸೃಷ್ಟಿಸಬೇಡಿ ಎಂದು ಸೂಚಿಸುತ್ತದೆ.

ಈ ಸಂದರ್ಭದಲ್ಲಿ, ಈ ಆಯತ್‌ನ ಮೂರು ಅರ್ಥಗಳು ಹೊಂದಬಹುದು (1) ನೀವು ಇನ್ನೊಂದು ರಾಷ್ಟ್ರದೊಂದಿಗೆ ಅವರು ಶಕ್ತಿಶಾಲಿ ಯಾದ್ದರಿಂದ ಹಾಗೂ ನೀವು ಅವರ ವಿರುದ್ಧ ಹೋರಾಡಲು ಸಾಧ್ಯವಿಲ್ಲದ್ದರಿಂದ ಅವರೊಂದಿಗೆ ಸಂಧಾನವನ್ನು ಮಾಡಿಕೊಳ್ಳಲು ಅನುಮತಿಸಲಾಗುವುದಿಲ್ಲ. ಒಪ್ಪಂದದ ನಂತರ, ಅವರು ನಿಮ್ಮನ್ನು ನಿರ್ಲಕ್ಷಿಸಿದಾಗ, ನೀವು ಆಂತರಿಕವಾಗಿ ಒಂದು ದಿವಸ ಅವರ ಮೇಲೆ ದಾಳಿ ಮಾಡಿ ನಾಶಪಡಿಸಲು ಸಿದ್ಧರಾಗುತ್ತೀರಿ. ರಾಜಕೀಯ ಜಗತ್ತು ಯಾವಾಗಲೂ ಈ ರೀತಿ ಮಾಡುತ್ತಿದೆ. ಇಸ್ಲಾಂ ಧರ್ಮದ ಅಡಿಪಾಯವು ನ್ಯಾಯ, ದಯೆ ಮತ್ತು ಬಂಧುಗಳಿಗೆ ಸಹಾಯ ನೀಡುವುದು ಎಂಬ ನಿಲುವುಗಳ ಮೇಲೆ ಆಧರಿತವಾಗಿರುವುದರಿಂದ. ಅದು ಇಸ್ಲಾಮ್‌ನ ಶತ್ರುಗಳ ವಿರುದ್ಧ ಮಾಡಿದರೂ ಸಹ ಈ ಕೃತ್ಯವನ್ನು ಇಷ್ಟಪಡುವುದಿಲ್ಲ ಮತ್ತು ಅದನ್ನು ನಿಷೇಧಿಸುತ್ತದೆ.

(2) ಎರಡನೆಯ ಅರ್ಥವೆಂದರೆ ದುರ್ಬಲ ರಾಷ್ಟ್ರದೊಂದಿಗೆ ಆ ರಾಷ್ಟ್ರವನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಮಾಡುವಂತಹ ಒಪ್ಪಂದಗಳನ್ನು ಮಾಡಬಾರದು. ಇಂದು ಯುರೋಪಿಯನ್ ರಾಷ್ಟ್ರಗಳು ಮಾಡುವಂತೆ ಮಾಡಬಾರದು.

(3) ಮೂರನೆಯ ಅರ್ಥವೆಂದರೆ ಒಂದು ರಾಷ್ಟ್ರವನ್ನು ದುರ್ಬಲಗೊಳಿಸುವ ಉದ್ದೇಶದಿಂದ ಮಾಡುವಂತಹ ಒಪ್ಪಂದಗಳನ್ನು ಅನುಮತಿಸಲಾಗುವುದಿಲ್ಲ. ನೀವು ಯಾರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುತ್ತೀರೋ ಅವರೊಂದಿಗೆ ಸಂಪೂರ್ಣವಾಗಿ ಒಪ್ಪಂದವನ್ನು ಮಾಡಿಕೊಳ್ಳಬೇಕು.

ಈ ಆಯತ್‌ನಲ್ಲಿ ಎಂತಹ ದೊಡ್ಡ ನೈತಿಕ ಬೋಧನೆಯನ್ನು ನೀಡಲಾಗಿದೆ. ಮತ್ತು ರಾಷ್ಟ್ರೀಯ ಪ್ರಾಬಲ್ಯವು ನಿಜವಾಗಿಯೂ ಒಳ್ಳೆಯದು ಆದರೆ ಮೋಸ ಮತ್ತು ವಂಚನೆಯ ಮೂಲಕ ಅದನ್ನು ಸಾಧಿಸಲು ಅನುಮತಿಸಲಾಗುವುದಿಲ್ಲ. ಒಪ್ಪಂದಗಳ ಮೂಲ ಉದ್ದೇಶ ಶಾಂತಿಯ ಸ್ಥಾಪನೆಯಾಗಿರಬೇಕು ಅನ್ಯರಿಗೆ ಮೋಸ ಅಥವಾ ವಂಚಿಸುವ ಹಾಗಿರಬಾರದು.

ಇಂದು ಯುರೋಪ್ ಏನು ಮಾಡುತ್ತಿದೆ ಎಂಬುದನ್ನು ನೋಡಿ. ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ದುರ್ಬಲ ರಾಷ್ಟ್ರಗಳು ನಾಶವಾಗುತ್ತವೆ. ಚೀನಾದಲ್ಲಿ ಏನಾಯಿತು, ಈಜಿಪ್ಟ್‌ನಲ್ಲಿ ಏನಾಯಿತು, ಟರ್ಕಿಯಲ್ಲಿ ಏನಾಯಿತು ಮತ್ತು ಇರಾನ್‌ನಲ್ಲಿ ಏನಾಯಿತು. ಮತ್ತು ಇದು ಒಂದು ಕಾಲದಲ್ಲಿ ಭಾರತದಲ್ಲಿ ಸಂಭವಿಸಿದೆ ಮತ್ತು ಇತ್ತೀಚಿನ ದಿನಗಳಲ್ಲಿ ಪೋಲೆಂಡ್, ಫ್ರಾನ್ಸ್, ಫಿನ್ಲ್ಯಾಂಡ್, ನಾರ್ವೆ, ರೊಮೇನಿಯಾ, ಜೆಕೊಸ್ಲೊವಾಕಿಯಾ ಇತ್ಯಾದಿಗಳಲ್ಲಿ ಇದೇ ರೀತಿಯ ಘಟನೆಗಳು ನಡೆಯುತ್ತಿವೆ.

ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಮುಸ್ಲಿಮರಿಗೆ ಆದೇಶ ನೀಡಿದ್ದಾನೆ (1) ರಾಷ್ಟ್ರೀಯ ಪ್ರಾಬಲ್ಯವು ನಿಜವಾಗಿಯೂ ಒಳ್ಳೆಯದು, ಆದರೆ ಅದನ್ನು ವಂಚನೆ ಮತ್ತು ಮೋಸದ ಮೂಲಕ ಸಾಧಿಸಲು ಅನುಮತಿಸಲಾಗುವುದಿಲ್ಲ.

(2) ವಂಚನೆಯಿಂದ ಮತ್ತೊಂದು ಶಕ್ತಿಯನ್ನು ದುರ್ಬಲಗೊಳಿಸುವ ಉದ್ದೇಶದಿಂದ ಯಾವುದೇ ಒಪ್ಪಂದವನ್ನು ಮಾಡಬಾರದು.

(3) ಯಾವುದೇ ಇತರ ಶಕ್ತಿಯ ಅಭಿವೃದ್ಧಿಯನ್ನು ತಡೆಯುವ ಉದ್ದೇಶದಿಂದ ಯಾವುದೇ ಒಪ್ಪಂದವನ್ನು ಮಾಡಬಾರದು. ಶಾಂತಿ ಸ್ಥಾಪನೆಗೆ ಎಂತಹ ಸೂಕ್ಷ್ಮ ಬೋಧನೆಯನ್ನು ನೀಡಲಾಗಿದೆ. ಅದನ್ನು ಅನುಸರಿಸಿದರೆ ಎಲ್ಲ ಗಲಭೆಗಳನ್ನು ಒಂದೇ ಬಾರಿಗೆ ನಿರ್ಮೂಲನೆ ಮಾಡಬಹುದು. ಮಿತ್ರರಾಷ್ಟ್ರಗಳ ಹಿಂದಿನ ಜಾಗತಿಕ ಮತ್ತು ಪ್ರಸ್ತುತ ಯುದ್ಧವು ಅಂತಹ ಒಪ್ಪಂದಗಳ ಪರಿಣಾಮವಾಗಿ ಹುಟ್ಟಿಕೊಂಡಿತು ಮತ್ತು ಈಗಲೂ ನಡೆಯುತ್ತಿದೆ. ಇದು ವಾರ್ಸಾ ಒಪ್ಪಂದವಿಲ್ಲದಿದ್ದರೆ, ಇದು ಹೊಸ ಯುದ್ಧವಾಗುತ್ತಿರಲಿಲ್ಲ. ಅಂತಹ ಒಪ್ಪಂದಗಳನ್ನು ಅನುಮತಿಸಲಾಗುವುದಿಲ್ಲ ಎಂದು ಪವಿತ್ರ ಖುರ್‌ಆನ್ ಭೋದಿಸುತ್ತದೆ. ಒಪ್ಪಂದವು ಉತ್ತಮ ನಂಬಿಕೆಯನ್ನು ಆಧರಿಸಿರಬೇಕು ಮತ್ತು ಶಾಂತಿಯನ್ನು ಕಾಪಾಡುವ ಏಕೈಕ ಉದ್ದೇಶವನ್ನು ಹೊಂದಿರಬೇಕು.

**ಇನ್ನಮಾ ಯಬ್ಲೂ ಕುಮುಲ್ಲಾಹು ಬಿಹೀ** ನಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳಿದ್ದಾನೆ ಓ ಮುಸ್ಲಿಮರೇ! ಈ ಅವಕಾಶಗಳು ಪರೀಕ್ಷೆಯಾಗಿ ಬರುತ್ತವೆ. ಇಸ್ಲಾಂ ಧರ್ಮದ ನೈತಿಕ ಬೋಧನೆಗಳಿಗೆ ನೀವು ಹೇಗೆ ದೃಢವಾಗಿ ಬದ್ಧರಾಗಿದ್ದೀರಿ ಎಂಬುದನ್ನು ಸರ್ವಶಕ್ತನಾದ ಅಲ್ಲಾಹನು ನೋಡುತ್ತಾನೆ ಮತ್ತು ಪ್ರಪಂಚದ ಬೆಳವಣಿಗೆಗಳು ನಿಮ್ಮನ್ನು ಇತರ ರಾಷ್ಟ್ರಗಳ ಹೆಜ್ಜೆಗಳನ್ನು ಅನುಸರಿಸುವಂತೆ ಮಾಡುವುದಿಲ್ಲ.

ಈ ವಿಷಯುವು ಪವಿತ್ರ ಖುರ್‌ಆನ್‌ನ ಸತ್ಯಕ್ಕೆ ಉತ್ತಮ ಪುರಾವೆಯಾಗಿದೆ ಮತ್ತು ಇಸ್ಲಾಂ ಧರ್ಮದ ಶ್ರೇಷ್ಠತೆಗೆ ಎಂತಹ ದೊಡ್ಡ ಪುರಾವೆಯಾಗಿದೆ. ಪವಿತ್ರ ಪ್ರವಾದಿ(ಸ) ರವರು ಮಕ್ಕಾದಲ್ಲಿ ನೆಲೆಸಿದ್ದಾಗ ಮುಸ್ಲಿಮರು ಒಂದು ಇಂಚು ಭೂಮಿಯನ್ನು ಸಹ ಹೊಂದಿರಲಿಲ್ಲ. ಆದರೆ ಒಂದು ವೈಭವಯುತ ಹಾಗೂ ಮಹಾನ್ ಸರ್ಕಾರದ ಕಟ್ಟಳೆಗಳನ್ನು

ವಿವರಿಸಲಾಗುತ್ತಿದೆ ಮತ್ತು ನಂತರ ಪ್ರತಿಯೊಬ್ಬ ಜ್ಞಾನಿ ಮತ್ತು ಉದಾತ್ತ ವ್ಯಕ್ತಿಗಳು ಅದನ್ನು ಕೇಳಿದ ನಂತರ ಈ ಶಿಕ್ಷಣದ ಶ್ರೇಷ್ಠತೆಯನ್ನು ಒಪ್ಪಿಕೊಳ್ಳದೆ ಉಳಿಯಲು ಸಾಧ್ಯವಿಲ್ಲ. ಅದು ಇಂದಿಗೂ ನಿಜವಲ್ಲವೇ? ಒಂದು ಸಾವಿರದ ಮುನ್ನೂರು ವರ್ಷಗಳು ಕಳೆದಿವೆ ಮತ್ತು ಈ ಸತ್ಯವು ಬಹಿರಂಗಗೊಳ್ಳುತ್ತಿದೆ. ಇಂದಿನ ಗಲಭೆಗಳು ಮತ್ತು ರಾಷ್ಟ್ರಗಳ ಚಡಪಡಿಕೆಗಳು ಈ ಆಜ್ಞೆಗಳ ನಿರ್ಲಕ್ಷ್ಯದಿಂದ ಉಂಟಾಗುತ್ತಿವೆ. **(ತಫ್ಸೀರ್ ಕಬೀರ್, ಸಂಪುಟ–4, ಪುಟ–229, ಪ್ರಕಟಿತ ಖಾದಿಯಾನ್ 2010)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು.**
**ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್–ಉಲ್–ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಅಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಷೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ. **(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 06 October 2022, Issue No. 40

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಐರ್ಲ್ಯಾಂಡ್‌ನ ಪ್ರವಾಸ (ಸೆಪ್ಟೆಂಬರ್ 2014)*

(ಬದರ್ ಸಂಚಿಕೆ 39ರ ಉಳಿದ ಭಾಗ)

ಹುಝೂರೆ ಅನ್ವರ್ ಹೇಳಿದರು. ಇಸ್ಲಾಮ್ ಅಂತೂ ತುಂಬಾ ಶಾಂತಿಪೂರ್ಣ ಧರ್ಮವಾಗಿದೆ. ಆದರೆ ಉಗ್ರವಾದಿ ಮುಸಲ್ಮಾನರು ಮತ್ತು ಭಯೋತ್ಪಾದಕರು ಇಸ್ಲಾಂ ಧರ್ಮದ ಹೆಸರನ್ನು ಕೆಡಿಸುತ್ತಿದ್ದಾರೆ. ಅದಾಗ್ಯೂ ಇಸ್ಲಾಮ್ ಧರ್ಮದ ಯಾವ ಸಂಬಂಧ ಭಯೋತ್ಪಾದಕ ಯೋಜನೆ ಇಲ್ಲ. ಯಾವ ವ್ಯಕ್ತಿಯನ್ನಾಗಲೀ ಅಥವಾ ಯಾವ ಗುಂಪನ್ನಾಗಲೀ ಅವರ ತಪ್ಪುಗಳನ್ನು ಅವರ ಧರ್ಮದ ಜೊತೆ ಸೇರಿಸುವುದು ನ್ಯಾಯವಲ್ಲ.

ಆಗ ಸ್ಪೀಕರರು ಹೇಳಿದರು. ಕೆಲ ಸ್ಥಳಗಳಲ್ಲಿ ಕ್ರೈಸ್ತರ ಮೇಲೂ ದೌರ್ಜನ್ಯಗಳಾಗುತ್ತವೆ.

ಹುಝೂರ್ ಹೇಳಿದರು. ಕ್ರೈಸ್ತರ ಕಡೆಯಿಂದನು ದೌರ್ಜನ್ಯಗಳಾಗುತ್ತವೆ. ಯಾರೂ ಸಹ ಅವರ ಧರ್ಮದೊಂದಿಗೆ ಹೆಸರನ್ನು ಜೋಡಿಸುತ್ತಿಲ್ಲ. ಆ ದೌರ್ಜನ್ಯವು ಕ್ರೈಸ್ತರು ಎಸಗಿದ್ದಾರೆ ಎಂದು.

ಭೇಟಿಯ ನಡುವೆ ಇನ್ನಿತರ ವಿವಿಧ ಕಾರ್ಯಗಳ ಮತ್ತು ಸಮಸ್ಯೆಗಳ ಕುರಿತು ಸಹ ಮಾತುಗಳಾದವು ಮತ್ತು ವಿಚಾರ ವಿನಿಮಯಗಳಾದವು.

ಭೇಟಿಯ ಸಮಯ 15 ನಿಮಿಷ ನಿಗದಿಪಡಿಸಲಾಗಿತ್ತು. ಆದರೆ ಈ ಭೇಟಿ 45 ನಿಮಿಷಗಳವರೆಗೆ ನಡೆಯಿತು. ಸ್ಪೀಕರರ ಕಾರ್ಯದರ್ಶಿ ಆ ಸಮಯ ಅವರಿಗೆ ಸಮಯದ ಕುರಿತು ಪದೇ ಪದೇ ಗಮನ ಸೆಳೆಯುತ್ತಿದ್ದರು. ಇದೀಗ ಸಂಸತ್ತಿನ ಅಧಿವೇಶನ ಪ್ರಾರಂಭವಾಗಲಿದೆ ಮತ್ತು ಅದರಲ್ಲಿ ತಡವಾಗುತ್ತಿದೆ. ಆದರೆ ಸ್ಪೀಕರರು ಆ ಕಡೆ ಯಾವ ಗಮನವು ಕೊಡುತ್ತಿರಲಿಲ್ಲ ಮತ್ತು ನಿರಂತರ 45 ನಿಮಿಷದವರಗೆ ಕುಳಿತುಕೊಂಡಿದ್ದರು.

11 ಗಂಟೆ 45 ನಿಮಿಷಕ್ಕೆ ಈ ಭೇಟಿಯು ಮುಕ್ತಾಯಗೊಂಡಿತು.

### 24 ಸೆಪ್ಟೆಂಬರ್ ಬುಧವಾರ

ಕಾರ್ಯಕ್ರಮದನ್ವಯ ಹುಝೂರ್ ಅನ್ವರ್ ರೂಮ್ ನಂಬರ್ 2ಕ್ಕೆ ಆಗಮಿಸಿದರು. ಅಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ಸಂಸತ್ ಸದಸ್ಯರು ಮತ್ತು ಸೆನೆಟರೀಜ್ಹ್ ಹುಝೂರರನ್ನು ಕಾಯುತ್ತಿದ್ದರು. ಆ ಸದಸ್ಯರಲ್ಲಿ ದೇಶದ ನಾಲ್ಕು ದೊಡ್ಡ ರಾಜಕೀಯ ಪಕ್ಷಗಳಾದ Fine fail, finegale, Labour ಮತ್ತು Sinnfiin ರ ಪ್ರತಿನಿಧಿಗಳು ಹಾಜರಿದ್ದರು.

ಪ್ರಪ್ರಥಮವಾಗಿ ಸಂಸತ್ ಸದಸ್ಯರಾದ Hon, Bamom o' liv ರವರು ಸಂಸತ್ತಿನಲ್ಲಿ ವಿರೋಧ ಪಕ್ಷದ ಹಿರಿಯ ನಾಯಕರು, ಹುಝೂರ್ ಸಂಸತ್ತಿಗೆ ಪ್ರವೇಶಿಸಿದ ಮೇಲೆ ಸ್ವಾಗತ ಕೋರಿದರು. ನಂತರ ಅವರು ಜಮಾಅತಿನ ಕಾರ್ಯ ಮತ್ತು ಸೇವೆಗಳನ್ನು ಶ್ಲಾಘಿಸಿದರು ಮತ್ತು ಜಮಾಅತ್ ನೀಡಿದ ಸಹಕಾರದ ಬಗ್ಗೆ ಕೊಂಡಾಡಿದರು. ಅವರು ಜಮಾಅತಿನ ಮೇಲೆ ಆಗುತ್ತಿರುವ ಹಿಂಸೆಯ ಬಗ್ಗೆಯೂ ಪ್ರಸ್ತಾಪಿಸಿದರು. ಅನಂತರ ಎಲ್ಲಾ ಸದಸ್ಯರು ಸರತಿಯಂತೆ ತಮ್ಮ ಪರಿಚಯ ಮಾಡಿಕೊಟ್ಟರು. ಅದರಲ್ಲಿ ಕೆಲ ಸಂಸತ್ ಸದಸ್ಯರ ಹೆಸರುಗಳು ಇಂತಿವೆ.

Hon. Dan Naville (chairman Finegale party)
Hon. Johna Tuffi
Hon. Joe Sean Crow
Hon. Eri Byrn
Hon. Earon Crin
Hon. Hilde Garde
Hon. Fidelha Healy

ಸಂಸತ್ ಸದಸ್ಯರೆಲ್ಲರೂ ಹುಝೂರೆ ಅನ್ವರ್ ಅವರೊಂದಿಗೆ ಹೇಳಿದರು. ಅಹ್ಮದಿಯಾ ಜಮಾಅತ್ ಯಾವ ರೀತಿ ಮಾನವೀಯತೆಯ ಗರಿಮೆ ಸ್ಥಾಪಿಸಲು ಹೇಳುತ್ತದೆ. ಅದು ಇತರ ಮುಸ್ಲಿಮರಲ್ಲಿ ಕಂಡುಬರುತ್ತಿಲ್ಲ. ಈ ಮಾಹಿತಿ ನಾನು ತುಂಬಾ ಆಳಕ್ಕೆ ಹೋಗಿ ಪಡೆದಿರುತ್ತೇನೆ. ಡಬ್ಲಿನ್ ದೊಡ್ಡ ನಗರವಾಗಿದೆ ಮತ್ತು ದೇಶದ ರಾಜಧಾನಿಯೂ ಹೌದು. ನಿಮ್ಮ ಪ್ರಥಮ ಮಸೀದಿ ಇಲ್ಲಿ ಆಗಬೇಕಾಗಿದೆ.

ಆಗ ಹುಝೂರೆ ಅನ್ವರ್ ಹೇಳಿದರು. ನಾವು ಇನ್‌ಶಾಅಲ್ಲಾಹ್ ಅತೀ ಶೀಘ್ರವಾಗಿ ಡಬ್ಲಿನ್‌ನಲ್ಲಿಯೂ ಮಸೀದಿ ನಿರ್ಮಿಸುವೆವು. ಇಲ್ಲಿಯೂ ಸಹ ಮಸೀದಿಯ ಉದ್ಘಾಟನೆ ಮಾಡುವೆವು. ಅಹ್ಮದಿಯಾ ಜಮಾಅತ್‌ನ ಕುರಿತು ಒಂದು ಪ್ರಶ್ನೆಯ ಉತ್ತರವಾಗಿ ಹೇಳಿದರು. ಅಹ್ಮದಿಯಾ ಸಮುದಾಯವು ಇಸ್ಲಾಮಿನ ಒಂದು ಅಂಶವಾಗಿದೆ ಮತ್ತು ಯಥಾರ್ಥ ಇಸ್ಲಾಂ ಆಗಿದೆ.

ಹಝ್ರತ್ ರಸೂಲುಲ್ಲಾಹ್(ಸ) ಅಂತಿಮ ಕಾಲದಲ್ಲಿ ಓರ್ವ ಸುಧಾರಕನು ಆಗಮಿಸುವ ಭವಿಷ್ಯವಾಣಿಯನ್ನು ನುಡಿದಿದ್ದರು. ಅವನು ಧರ್ಮವನ್ನು ನೈಜ ತತ್ವಗಳಲ್ಲಿ ಸ್ಥಾಪಿಸುವನು ಮತ್ತು ಸರ್ವರಿಗೂ ಇಸ್ಲಾಮಿನ ನಿಜವಾದ ಮತ್ತು ಯಥಾರ್ಥ ಶಿಕ್ಷಣದತ್ತ ಕರೆ ನೀಡುವನು ಮತ್ತು ಒಂದು ಕೈಯಲ್ಲಿ ಒಟ್ಟುಗೂಡಿಸುವನು.

ಅಂದಹಾಗೆ ಆ ಭವಿಷ್ಯವಾಣಿಯ ಪ್ರಕಾರ ಹಝ್ರತ್ ಮಿರ್ಝಾ ಗುಲಾ ಅಹ್ಮದ್ ಖಾದಿಯಾನಿ(ಅ) ಆಗಮಿಸಿದರು. ಅವರು ಮಸೀಹ್ ಮತ್ತು ಮಹದಿಯ ದಾವೆಯನ್ನು ಸಾರಿದರು ಮತ್ತು ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರು. ಇದೀಗ ಅವರನ್ನು ಇತರ ಮುಸ್ಲಿಂ ಪಂಗಡಗಳು ಧಿಕ್ಕರಿಸಿ ನಮ್ಮನ್ನು ವಿರೋದಿಸಿ ಪೀಡನೆಯನ್ನು ನೀಡುತ್ತಿದ್ದಾರೆ ವಿಶೇಷವಾಗಿ ಪಾಕಿಸ್ತಾನದಲ್ಲಿ ಒಂದು ದೀರ್ಘ ಸಮಯದಿಂದ ಹಿಂಸೆಯು ನಡೆದುಕೊಂಡು ಬಂದಿದೆ. ಅಹ್ಮದಿಯರನ್ನು ಹತ್ಯೆ ಮಾಡುತ್ತಿದ್ದಾರೆ.

ಹುಝೂರ್ ಅನ್ವರ್ ಹೇಳಿದರು. ಈಗಷ್ಟೇ ಎರಡು ದಿನಗಳ ಹಿಂದೆ ಓರ್ವ ಅಹ್ಮದಿ ಡಾಕ್ಟರ್ ರನ್ನು ಹುತಾತ್ಮರನ್ನಾಗಿ ಮಾಡಿದರು. ಅದೇ ಹಿಂಸೆ ಮತ್ತು ಸರಕಾರದ ನಿಷೇಧಾತ್ಮಕ ಕಾನೂನುಗಳಿಂದಾಗಿ ಲಂಡನ್ನಿಗೆ ನಮ್ಮ ಕೇಂದ್ರ ಸ್ಥಳಾಂತರಿಸ ಬೇಕಾಯಿತು. ನನಗಿಂತ ಮುಂಚಿನ ಖಲೀಫರು ಪಾಕಿಸ್ತಾನದಿಂದ ಹಿಝ್ರತ್ ಮಾಡಿ ಲಂಡನ್‌ಗೆ ಬರಬೇಕಾಯಿತು. ಅಲ್ಲಿಂದ ಈಗಲೂ ನಮ್ಮ ಕೇಂದ್ರ ಲಂಡನ್ ಆಗಿದೆ. ಅಹ್ಮದಿಯಾ ಜಮಾಅತಿನ ಮುಖಂಡರನ್ನು ಖಲೀಫತುಲ್ ಮಸೀಹ್ ಎಂದು ಕರೆಯಲ್ಪಡುತ್ತಾರೆ.

ಹುಝೂರ್ ಅನ್ವರ್ ನುಡಿದರು. ನಾವು ಇಸ್ಲಾಮಿನ ಪ್ರಚಾರ ಮತ್ತು ಲೋಕದ ಮುಂದೆ ಇಸ್ಲಾಮಿನ ಸುಂದರವಾದ ಶಿಕ್ಷಣ, ಇಸ್ಲಾಮಿನ ಶಾಂತಿ ಸೌಹಾರ್ದತೆಯ ಸಂದೇಶ ತಲುಪಿಸುವ ಜೊತೆ ಜೊತೆಯಲ್ಲಿ ಮಾನವೀಯ ಸೇವೆಯನ್ನು ಕೈಗೊಳ್ಳುತ್ತೇವೆ. ಮಾನವ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ.

ಆಫ್ರಿಕಾದ ಬಡ ರಾಷ್ಟ್ರಗಳಲ್ಲಿ ನಮ್ಮ ಶಾಲೆಗಳು ಮತ್ತು ಆಸ್ಪತ್ರೆಗಳು ಸ್ಥಾಪಿತಗೊಂಡಿವೆ. ಶುದ್ಧ ಕುಡಿಯುವ ನೀರು ಒದಗಿಸುವುದು ವಿದ್ಯುತ್ ಪೂರೈಕೆ ಮತ್ತು ಉದ್ಯೋಗ ಸೃಷ್ಟಿ ಹಾಗೂ ಅಗತ್ಯ ಜನರ ಬೇಡಿಕೆಗಳನ್ನು ಈಡೇರಿಸಲು ವಿವಿಧ ಯೋಜನೆಗಳು ಜಾರಿಯಲ್ಲಿವೆ.

ಹುಝೂರೆ ಅನ್ವರ್ ನುಡಿದರು. ಜನರು ನಮ್ಮನ್ನು ಯಾವ ರೀತಿ ವರ್ತಿಸುತ್ತಿದ್ದಾರೆ ಎಂದು ಲೆಕ್ಕಿಸದೇ, ನಮ್ಮ ವಿರುದ್ಧ ಏನೆಲ್ಲಾ ಅಡ್ಡಿ ಆತಂಕಗಳನ್ನು ಸೃಷ್ಟಿಸುತ್ತಿದ್ದಾರೆ ಎಂಬುದು ಉಪೇಕ್ಷಿಸಿ ನಾವು ಜಾತಿ ವರ್ಣ ಭೇಧಗಳಲ್ಲದೇ ಸಮಾನ ರೀತಿಯಲ್ಲಿ ಸೇವೆ ಮಾಡುತ್ತಿದ್ದೇವೆ.

ಜಿಹಾದ್ ಸಂಬಂಧ ಹುಝೂರ್ ನುಡಿದರು. ನಾವು ಜಿಹಾದಿನ ಅರ್ಥ ಇತರ ಮುಸ್ಲಿಮರ ಹಾಗೆ ಅರ್ಥೈಸುವುದಿಲ್ಲ. ನಾವು ಒಪ್ಪುವುದೇನೆಂದರೆ ಅತಿ ದೊಡ್ಡ ಜಿಹಾದ್ ತನ್ನೊಳಗೆ ಪರಿವರ್ತನೆ ತರುವುದಾಗಿದೆ. ದುಷ್ಟತನದ ವಿರುದ್ಧ ಜಿಹಾದ್ ಮಾಡಬೇಕಾಗಿದೆ ಮತ್ತು ಪ್ರಚಾರದ ಜಿಹಾದ್ ಇದೆ. ಶಾಂತಿ ಮತ್ತು ಸಮಾನತೆಯ ಸಂದೇಶ ನೀಡುವುದು ಜಿಹಾದ್ ಆಗಿದೆ.

ಓರ್ವ ಸಂಸತ್ ಸದಸ್ಯೆ ಪ್ರಶ್ನಿಸಿದರು – ಅಹ್ಮದಿಯೇತರ ಮುಖಂಡರೊಡನೆ ನಿಮ್ಮ ಸಂಪರ್ಕವಿದೆಯೋ ಮತ್ತು ನೀವೆಲ್ಲ ಒಂದು ಸ್ಥಳದಲ್ಲಿ ಸೇರುತ್ತಿರಾ?

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.